RNI: KARKAN\2019\78042



ಸಂಪಾದಕರು : ಸಿ.ಎಸ್.ಸಮಗಂಡಿ.

# ಸತ್ಯ ಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳಿಯವರ ಕ್ರಾಸ್.
ಚನ್ನು ಸ್ಟೀಲ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ.
ಜೆಂಟ್ಸ್ ಸ್ಪೆಷಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ನರೇಗಲ್ಲದಲ್ಲಿ ಮಳೆ-ಗಾಳಿ ಅಬ್ಬರ; ಮರ, ವಿದ್ಯುತ್ ಕಂಬಗಳು ಧರೆಗೆ » 2

ಪುಟ್ಟರಾಜ ಗವಾಯಿಗಳು ಶಿವಯೋಗಿ ಸಾಧನೆ ಮಾಡಿದ್ದರಿಂದ ಶಿವಯೋಗಿಗಳಾದರು » 3

ಗಜಾನನ ಮಹಾಮಂಡಳಿಯಿಂದ ವಿವಿಧ ವಿಭಾಗಗಳಲ್ಲಿ ವಿಜೇತ ಮಂಡಳಿಗಳ ಆಯ್ಕೆ » 4

ಸಂಪುಟ(Volume): 1 ಸಂಚಿಕೆ (Issue): 73 ● ಪುಟ (Page): 4 ● ದರ: Rs. 4 ಬುಧವಾರ 23 ಸೆಪ್ಟೆಂಬರ್ 2026 ● 23 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

## ಜಿಲ್ಲೆಯ 3 ತಾಲೂಕು ಸಾಮಾನ್ಯ ಬರಪೀಡಿತ

### ಗದಗ, ರೋಣ, ಮುಂಡರಗಿ ತಾಲೂಕುಗಳನ್ನು ಘೋಷಣೆ ಮಾಡಿದ ಸರ್ಕಾರ



ಗದಗ: ರೈತರ ಪ್ರತಿಭಟನೆ ಜೊತೆಗೆ ಶಾಸಕ ಎಚ್.ಕೆ.ಪಾಟೀಲ ಅವರ ರಾಜೀನಾಮೆ ಎಚ್ಚರಿಕೆ ಬೆನ್ನಲ್ಲೆ ಎಚ್ಚೆತ್ತ ಸರಕಾರ ಜಿಲ್ಲೆಯ ಮೂರು ತಾಲೂಕುಗಳನ್ನು ಸಾಮಾನ್ಯ ಬರಪೀಡಿತ ಪ್ರದೇಶವೆಂದು ಘೋಷಿಸಿದೆ.

ಆದರೆ, ತೀವ್ರ ಬರದ ಸಂಕಷ್ಟದ ನಡುವೆಯೂ ಜಿಲ್ಲೆಯ ಗದಗ, ರೋಣ ಹಾಗೂ ಮುಂಡರಗಿಯನ್ನು ಕೇವಲ ಸಾಮಾನ್ಯ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿರುವುದು ಜಿಲ್ಲೆಯ ರೈತ ಸಮೂಹದ ಅಸಮಾಧಾನಕ್ಕೆ ಕಾರಣವಾಗಿದ್ದು, ಸರಕಾರ ಜಿಲ್ಲೆಯ ಜನರ ಮೂಗಿಗೆ ತುಪ್ಪ ನವರುವ ಕೆಲಸ ಮಾಡಿದೆ ಎಂದು ಆಕ್ರೋಶ ವ್ಯಕ್ತವಡಿಸಿದ್ದಾರೆ. ಈ ಹಿಂದೆ ಗಜೇಂದ್ರಗಡ ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಿಸಲಾಗಿತ್ತು. ಒಟ್ಟಾರೆ ಜಿಲ್ಲೆಯ ನಾಲ್ಕು ತಾಲೂಕುಗಳು ಬರಪೀಡಿತ ಪ್ರದೇಶಗಳಿಗೆ ಸೇರ್ಪಡೆಯಾದಂತಾಗಿದೆ.

ಗದಗ ತಾಲೂಕಿನಲ್ಲಿ 304.7 ಮಿ.ಮೀ. ವಾಡಿಕೆ ಮಳೆ ಪೈಕಿ ಕೇವಲ 154.9 ಮಿ.ಮೀ. ಮಳೆಯಾಗಿತ್ತು. ಶೇ. 49ರಷ್ಟು ಮಳೆ ಕೊರತೆ ಅನುಭವಿಸಿತ್ತು. ಮುಂಡರಗಿ ತಾಲೂಕಿನಲ್ಲೂ 232.6 ಮಿ.ಮೀ. ವಾಡಿಕೆ ಮಳೆ ಪೈಕಿ ಕೇವಲ 120.9 ಮಿ.ಮೀ. ಮಳೆಯಾಗಿತ್ತು. ಶೇ. 48ರಷ್ಟು ಮಳೆ ಕೊರತೆ ಅನುಭವಿಸಿತ್ತು. ಅದರಂತೆ ರೋಣ ತಾಲೂಕಿನಲ್ಲೂ 338.0 ಮಿ.ಮೀ. ವಾಡಿಕೆ ಮಳೆ ಪೈಕಿ ಕೇವಲ 179.8 ಮಿ.ಮೀ. ಮಳೆಯಾಗಿತ್ತು. ಶೇ. 47ರಷ್ಟು ಮಳೆ ಕೊರತೆ ಅನುಭವಿಸಿತ್ತು.

ಮುಂಗಾರು ವೈಫಲ್ಯದ ನಡುವೆ ಬೆಳೆಗಳು ಸಂಪೂರ್ಣ ಹಾಳಾಗಿದ್ದರಿಂದ ರೈತರ ಸಮೂಹ ತೀವ್ರ ಸಂಕಷ್ಟಕ್ಕೊಳಗಾಗಿದ್ದವು. ಈ ಹಿನ್ನೆಲೆಯಲ್ಲಿ ರೈತರು, ವಿವಿಧ ಸಂಘಟನೆಗಳು ಇಡೀ ಜಿಲ್ಲೆಯನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡುವಂತೆ ಆಗ್ರಹಿಸಿ ಪ್ರತಿಭಟನೆ ಆರಂಭಿಸಿದ್ದವು. ಆದರೆ, ಸರಕಾರ ಗಜೇಂದ್ರಗಡ ಹೊರತುಪಡಿಸಿ ಜಿಲ್ಲೆಯ ಗದಗ, ರೋಣ ಹಾಗೂ ಮುಂಡರಗಿಯನ್ನು ಕೇವಲ ಸಾಮಾನ್ಯ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದೆ.

## ಗದಗ ಬರ ಘೋಷಣೆ ಗದ್ದಲ: ಎಚ್.ಕೆ. ಪಾಟೀಲ್ ರಾಜೀನಾಮೆ ಎಚ್ಚರಿಕೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಖಡಕ್ ಪ್ರತಿಕ್ರಿಯೆ!

**ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು:**

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರ ಪರಿಸ್ಥಿತಿ ಹಾಗೂ ಗದಗ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವ ವಿಚಾರವಾಗಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ಅಂಗಳದಲ್ಲಿ ಚರ್ಚೆಗಳು ಕಾವು ಪಡೆದುಕೊಂಡಿವೆ. ಗದಗ ಜಿಲ್ಲೆಯಲ್ಲಿ ಮಳೆ ಅಭಾವದಿಂದ ಎದುರಾಗಿರುವ ಗಂಭೀರ ಸ್ಥಿತಿಯನ್ನು ಪರಿಗಣಿಸಿ ತಕ್ಷಣವೇ ಗದಗವನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸದಿದ್ದರೆ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹಿರಿಯ ನಾಯಕ ಎಚ್.ಕೆ. ಪಾಟೀಲ್ ನೀಡಿರುವ ಎಚ್ಚರಿಕೆ ರಾಜ್ಯ ರಾಜಕೀಯದಲ್ಲಿ ಭಾರೀ ಸಂಚಲನ ಮೂಡಿಸಿದೆ.



**ಎಚ್.ಕೆ. ಪಾಟೀಲ್ ಆಗ್ರಹದಲ್ಲಿ ಸತ್ಯಾಂಶವಿದೆ: ಡಿಕೆಶಿ ಬೆಂಬಲ:** ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಎಚ್.ಕೆ. ಪಾಟೀಲರ ಆಗ್ರಹವನ್ನು ಸಂಪೂರ್ಣವಾಗಿ ಬೆಂಬಲಿಸಿದ್ದಾರೆ. "ನಾನು ಸ್ವತಃ ಗದಗ ಜಿಲ್ಲೆಗೆ ಭೇಟಿ ನೀಡಿ ಪ್ರವಾಸ ಮಾಡಿದ್ದೇನೆ. ನನ್ನ ಜೊತೆ ಪಾಟೀಲರು ಸಹ ಇದ್ದರು. ಅಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿದ್ದೇನೆ. ಈ ಬಾರಿ ಮಲೆನಾಡು ಭಾಗದಲ್ಲೇ ಭೀಕರ ಅಭಾವ ಎದುರಾಗಿ ಬರ ಬಂದಿದೆ ಎಂದಮೇಲೆ, ಬಯಲುಸೀಮೆಯ ಗದಗದಲ್ಲಿ ಬರ ಇರುವುದರಲ್ಲಿ ಯಾವುದೇ ಅನುಮಾನವಿಲ್ಲ. ಜಿಲ್ಲೆಯ ರೈತರ ಮತ್ತು ಸಾರ್ವಜನಿಕರ ಕಷ್ಟಗಳ ಸಂಪೂರ್ಣ ಅರಿವು ನನಗಿದೆ" ಎಂದು ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಈಗಾಗಲೇ ಬಂದಿರುವ ವರದಿಗಳ ಆಧಾರದ ಮೇಲೆ ರಾಜ್ಯದ 124 ತಾಲೂಕುಗಳನ್ನು ಅಧಿಕೃತವಾಗಿ ಬರಪೀಡಿತ ಎಂದು ಘೋಷಿಸಲಾಗಿದೆ.

ದಿನದಿಂದ ದಿನಕ್ಕೆ ಪರಿಸ್ಥಿತಿ ತೀವ್ರಗೊಳ್ಳುತ್ತಿದ್ದು, ಮುಂಬರುವ ದಿನಗಳಲ್ಲಿ ಈ ಸಂಖ್ಯೆ 200 ತಾಲೂಕುಗಳಿಗೆ ಏರಿಕೆಯಾಗುವ ಸಾಧ್ಯತೆಯಿದೆ.

ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಹೆಚ್ಚುವರಿ ವರದಿಗಳನ್ನು ತರಿಸಿಕೊಳ್ಳಲಾಗುತ್ತಿದೆ ಎಂದರು.

ವಿಪಕ್ಷಗಳ ನಡವಳಿಕೆಗೆ ತೀವ್ರ ಆಕ್ರೋಶ

ಇದೇ ಸಂದರ್ಭದಲ್ಲಿ ವಿರೋಧ ಪಕ್ಷಗಳ ವಿರುದ್ಧ ವೀಕ್ಷಕ ದಾಳಿ ನಡೆಸಿದ ಸಿಎಂ"ವಿಪಕ್ಷ ನಾಯಕರು ಅಧಿವೇಶನದ 10 ದಿನಗಳ ಅಮೂಲ್ಯ ಸಮಯವನ್ನು ಅನಗತ್ಯವಾಗಿ ವ್ಯರ್ಥ ಮಾಡಿದ್ದಾರೆ. ಅವರಿಗೆ ಸಮಯದ ಮಹತ್ವವಾಗಲಿ ಅಥವಾ ಜನರ ನೋವಾಗಲಿ ತಿಳಿದಿಲ್ಲ. ಅವರಿಗೆ ಕೇವಲ ರಾಜಕೀಯ ಮಾಡುವುದು ಮಾತ್ರ ಗೊತ್ತಿದೆ" ಎಂದು ಕಿಡಿಕಾರಿದರು.

"ಬರ ಪರಿಹಾರದ ನಿರ್ಧಾರವನ್ನು ನಾವು ಕೇವಲ ಸಚಿವ ಸಂಪುಟ (ಕ್ಯಾಬಿನೆಟ್) ಸಭೆಯಲ್ಲೇ ತೀರ್ಮಾನಿಸಬಹುದಿತ್ತು. ಆದರೆ ನಮಗೆ ಪ್ರಜಾಪ್ರಭುತ್ವದ ಮೇಲೆ ಗೌರವವಿದೆ. ಜನಪ್ರತಿನಿಧಿಗಳ ಮೂಲಕ ನಾಡಿನ ಜನರ ನೈಜ ಕಷ್ಟಗಳನ್ನು ನೇರವಾಗಿ ತಿಳಿಯಬೇಕೆಂಬ ಉದ್ದೇಶದಿಂದ ವಿಶೇಷ ಅಧಿವೇಶನ ಕರೆದು ವಿಸ್ತೃತ ಚರ್ಚೆಗೆ ಅವಕಾಶ ನೀಡಿದ್ದೆವು. ಸರ್ಕಾರ ಎಂದರೆ ಜನರ ದನಿಯಾಗಬೇಕು, ಅವರ ಭಾವನೆಗಳಿಗೆ ಸ್ಪಂದಿಸಬೇಕು" ಎಂದು ಹೇಳಿದರು.

ರೈತರ ಹಿತರಕ್ಷಣೆಗೆ ಸರ್ಕಾರ ಬದ್ಧ

ರೈತರ ಹಿತರಕ್ಷಣೆಯ ಕುರಿತು ಮಾತನಾಡಿದ ಅವರು, "ಆರಂಭದಲ್ಲಿ ಕಾಲಹರಣ ಮಾಡಿ, ಈಗ ಚರ್ಚೆಗೆ ಹೆಚ್ಚಿನ ಸಮಯ ಬೇಕು ಎಂದು ಕೇಳುವುದು ವಿರೋಧ ಪಕ್ಷಗಳ ಜವಾಬ್ದಾರಿರಹಿತ ನಡವಳಿಕೆಯನ್ನು ತೋರಿಸುತ್ತದೆ. ಅವರಿಗೆ ರಾಜಕೀಯವೇ ಮುಖ್ಯವಿರಬಹುದು, ಆದರೆ ನಮ್ಮ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ, ರೈತರ ಕಷ್ಟ ಪರಿಹರಿಸುವುದು ಮತ್ತು ಜನರ ಹಸಿವು ನೀಗಿಸುವುದೇ ಪ್ರಥಮ ಆದ್ಯತೆ" ಎಂದು ಪುನರುಚ್ಚರಿಸಿದರು.



## ನಟ ಅನಂತ್ ನಾಗ್‌ಗೆ ಫಾಲ್ಕೆ ಪ್ರಶಸ್ತಿ ಪ್ರದಾನ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ಏಕ್ತಾ ನಗರ (ಗುಜರಾತ್):**

ಕನ್ನಡದ ಖ್ಯಾತ ನಟ, ಅಭಿನಯ ಚತುರ ಅನಂತ್ ನಾಗ್ ಅವರಿಗೆ ಭಾರತೀಯ ಚಲನಚಿತ್ರ ರಂಗದ ಅತ್ಯುನ್ನತ ಗೌರವವಾದ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ'ಯನ್ನು ಮಂಗಳವಾರ ಪ್ರದಾನ ಮಾಡಿ ಗೌರವಿಸಲಾಯಿತು. ಗುಜರಾತ್‌ನ ನರ್ಮದಾ ಜಿಲ್ಲೆಯ ಏಕ್ತಾ ನಗರದ 'ಸ್ಟ್ಯಾಚ್ಯೂ ಆಫ್ ಯೂನಿಟಿ' ಸಂಕೀರ್ಣದಲ್ಲಿ ನಡೆದ ಅದ್ದೂರಿ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಪ್ರತಿಷ್ಠಿತ ಗೌರವವನ್ನು ಹಸ್ತಾಂತರಿಸಿದರು. ಐದು ದಶಕಗಳಿಗೂ ಹೆಚ್ಚು ಕಾಲ ಭಾರತೀಯ ಚಿತ್ರರಂಗಕ್ಕೆ ನೀಡಿದ ಅನನ್ಯ ಕೊಡುಗೆಯನ್ನು ಗುರುತಿಸಿ 2024ನೇ ಸಾಲಿನ ಈ ಪ್ರಶಸ್ತಿಯನ್ನು ಅವರಿಗೆ ನೀಡಲಾಗಿದೆ. ಸಮಾರಂಭಕ್ಕೆ ಆಗಮಿಸಿದ ಅನಂತ್ ನಾಗ್ ಅವರಿಗೆ ಸಭೆಯಲ್ಲಿದ್ದ ಗಣ್ಯರೆಲ್ಲರೂ ಎದ್ದು ನಿಂತು ಕರತಾಡನ ಮಾಡುವ ಮೂಲಕ ('ಸ್ಟ್ಯಾಂಡಿಂಗ್ ಒವೇಶನ್') ಗೌರವ ಸಲ್ಲಿಸಿದ್ದು ವಿಶೇಷವಾಗಿತ್ತು.

**'ರಂಗಭೂಮಿ ಹಾಗೂ ಪ್ರೇಕ್ಷಕರ ಪ್ರೀತಿಯೇ ನನ್ನ ಬಲ':** ಅನಂತ್ ನಾಗ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅನಂತ್ ನಾಗ್ ಅವರು, "ನನ್ನ ಐದು ದಶಕಗಳ ಈ ಸುದೀರ್ಘ ಅಭಿನಯ ಪಯಣದಲ್ಲಿ ನನ್ನನ್ನು ಬೆಳೆಸಿದ ರಂಗಭೂಮಿ, ಜೊತೆಗೆ ನಿಂತ ನಿರ್ದೇಶಕರು, ತಾಂತ್ರಿಕ ವರ್ಗ ಹಾಗೂ ದಶಕಗಳಿಂದ ನನ್ನ ಮೇಲಿಟ್ಟಿರುವ ಪ್ರೀತಿಯನ್ನು ನಿರಂತರವಾಗಿ ಕಾಯ್ದುಕೊಂಡು ಬಂದಿರುವ ಪ್ರೇಕ್ಷಕ ಮಹಾಪ್ರಭುವಿಗೆ ಈ ಪ್ರಶಸ್ತಿಯನ್ನು ಸಮರ್ಪಿಸುತ್ತೇನೆ. ಭಾರತೀಯ ಚಿತ್ರರಂಗದಲ್ಲಿ ವೈವಿಧ್ಯಮಯ ಪಾತ್ರಗಳನ್ನು ಮಾಡಲು ನನಗೆ ಅವಕಾಶ ಸಿಕ್ಕಿದ್ದು ನನ್ನ ಸುಯೋಗ. ಈ ಅತ್ಯುನ್ನತ ಗೌರವ ನನ್ನ ಹೊಣೆಗಾರಿಕೆಯನ್ನು ಮತ್ತಷ್ಟು ಹೆಚ್ಚಿಸಿದೆ," ಎಂದು ಭಾವಪೂರ್ಣವಾಗಿ ನುಡಿದರು.

**ಸಾಧನೆಯ ಹಾದಿ:** ದೇಶದ ಅತ್ಯಂತ ಜನಪ್ರಿಯ ಹಾಗೂ ಗೌರವಾನ್ವಿತ ನಟರಲ್ಲಿ ಒಬ್ಬರಾದ ಅನಂತ್ ನಾಗ್, ತಮ್ಮ 50 ವರ್ಷಗಳ ಗಮನಾರ್ಹ ವೃತ್ತಿಜೀವನದಲ್ಲಿ ಕನ್ನಡ, ಹಿಂದಿ, ಮರಾಠಿ ಸೇರಿದಂತೆ ವಿವಿಧ ಭಾಷೆಗಳ 300ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಜನಪ್ರಿಯ ಟೆಲಿವಿಷನ್ ಸರಣಿ 'ಮಾಲ್ಗುಡಿ ಡೇಸ್'ನಲ್ಲಿನ ಅವರ ಅಭಿನಯ ಮನೆಮಾತಾಗಿತ್ತು. ಇವರ ಕಲಾ ಸೇವೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರ 2025ರಲ್ಲಿ 'ಪದ್ಮಭೂಷಣ' ಪ್ರಶಸ್ತಿ ನೀಡಿ ಗೌರವಿಸಿತ್ತು.

### ಕನ್ನಡದ ಮಿಥ್ಯಗೆ 3 ರಾಷ್ಟ್ರ ಪ್ರಶಸ್ತಿಗಳ ಗರಿ:

**ಇದೇ ಸಮಾರಂಭದಲ್ಲಿ 2024ನೇ ಸಾಲಿನ ವಿವಿಧ ವಿಭಾಗಗಳಲ್ಲಿ ಒಟ್ಟು 92 ಸಾಧಕರಿಗೆ ರಾಷ್ಟ್ರಪತಿಗಳು ಪ್ರಶಸ್ತಿ ಪ್ರದಾನ ಮಾಡಿದರು. ಕನ್ನಡ ಚಿತ್ರರಂಗದ ಜನಪ್ರಿಯ ನಟ ರಕ್ಷಿತ್ ಶೆಟ್ಟಿ ಒಡೆತನದ 'ಪರಂವಃ ಸ್ಟುಡಿಯೋಸ್' ಮತ್ತು 'ಕೆಆರ್‌ಜಿ ಸ್ಟುಡಿಯೋಸ್' ಜಂಟಿಯಾಗಿ ನಿರ್ಮಿಸಿದ 'ಮಿಥ್ಯ' ಚಿತ್ರಕ್ಕೆ 3 ರಾಷ್ಟ್ರ ಪ್ರಶಸ್ತಿಗಳು ಲಭಿಸಿದ್ದು, ಚಿತ್ರತಂಡ ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸಿತು. ಇದಲ್ಲದೆ, ತುಳು ಭಾಷೆಯ 'ಇಂಬು' ಚಿತ್ರಕ್ಕೂ 1 ಪ್ರಶಸ್ತಿ ದೊರೆತಿದ್ದು, ಕರಾವಳಿ ಹಾಗೂ ಕನ್ನಡ ಚಿತ್ರರಂಗಕ್ಕೆ ರಾಷ್ಟ್ರಮಟ್ಟದಲ್ಲಿ ಪ್ರಶಂಸೆ ವ್ಯಕ್ತವಾಗಿದೆ.**

### ಕಸ್ತೂರಿ ರಂಗನ್ ವರದಿ | ವಿಧಾನಸಭೆಯಲ್ಲಿ ನಿರ್ಣಯ

## ನ್ಯೂನತೆ ಪರಿಶೀಲನೆಗೆ ಉನ್ನತ ಮಟ್ಟದ ಸಮಿತಿ

**ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು:**

ಕಸ್ತೂರಿ ರಂಗನ್ ವರದಿಯ ನ್ಯೂನ್ಯತೆಗಳ ಕುರಿತು ಪರಿಶೀಲನೆ ನಡೆಸಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲು ನಿರ್ಣಯ ಕೈಗೊಳ್ಳಲಾಗಿದೆ. ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಸರ್ಕಾರದ ಅಧಿಕೃತ ನಿರ್ಣಯವನ್ನು ಓದಿ ಹೇಳಿದರು.



ಪಶ್ಚಿಮ ಘಟ್ಟಗಳು ಕರ್ನಾಟಕದ ಪ್ರಮುಖ ನೈಸರ್ಗಿಕ ಸಂಪತ್ತು, ಜೀವವೈವಿಧ್ಯ ಮತ್ತು ಪರಿಸರ ಸಮತೋಲನದ ದೃಷ್ಟಿಯಿಂದ ಮಹತ್ವದ ಪ್ರದೇಶವಾಗಿದೆ. ಜುಲೈ 27, 2026ರಂದು ಭಾರತ ಸರ್ಕಾರವು ಕಸ್ತೂರಿ ರಂಗನ್ ವರದಿಯ ಮೇಲೆ 7ನೇ ಕರಡು ಅಧಿಸೂಚನೆಯನ್ನು ಪ್ರಕಟಿಸಿದ್ದು, ಕರ್ನಾಟಕದ 10 ಜಿಲ್ಲೆಗಳ 1449 ಗ್ರಾಮಗಳನ್ನೊಳಗೊಂಡ ಸುಮಾರು 20,668 ಚ.ಕಿ.ಮೀ ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮ ಪ್ರದೇಶ (ಇಎಸ್‌ಎ ) ಅಡಿಯಲ್ಲಿ ಗುರುತಿಸಿದೆ.

**ಸಾರ್ವಜನಿಕ ಅಸಮಾಧಾನ ಹಾಗೂ ನಿರ್ಣಯದ ಪ್ರಮುಖ ಅಂಶಗಳು:**

ಗ್ರಾಮದ ಅರಣ್ಯ ಪ್ರದೇಶದ ಜೊತೆಗೆ ಕೃಷಿ ಜಮೀನು, ತೋಟಗಳು, ಮನೆಗಳು ಹಾಗೂ ಸಾರ್ವಜನಿಕ ಸೌಲಭ್ಯಗಳನ್ನು ಇಎ ಅಡಿಯಲ್ಲಿ ಸೇರಿಸಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ಜಂಟಿ ಸಮೀಕ್ಷೆ ನಡೆಸದೆ ಉಪಗ್ರಹ ದತ್ತಾಂಶದ ಆಧಾರದ ಮೇಲೆ ಗಡಿ ನಿರ್ಧರಿಸಿರುವುದು, ಗ್ರಾಮದ ಐದನೇ ಒಂದು ಭಾಗ (1/5) ಅರಣ್ಯ ವ್ಯಾಪ್ತಿಯಲ್ಲಿದೆ ಎಂಬ ಕಾರಣಕ್ಕೆ ಇಡೀ ಗ್ರಾಮವನ್ನೇ ಇಎಸ್‌ಎ ಎಂದು ಘೋಷಿಸಿರುವುದು ಸರಿಯಲ್ಲ ಎಂದು ಉಲ್ಲೇಖಿಸಲಾಗಿದೆ. ಇದರಿಂದಾಗಿ ಮನೆ ನಿರ್ಮಾಣ, ಕುಟುಂಬದ ಆಸ್ತಿ ವಿಭಜನೆ ಹಾಗೂ ವಾರಸುದಾರಿಕೆಗೆ ಸಂಬಂಧಿಸಿದಂತೆ ತೊಂದರೆಗಳು ಉದ್ಭವಿಸುತ್ತವೆ ಎಂದು ನಿರ್ಣಯದಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಕರ್ನಾಟಕ ವಿಧಾನಸಭೆಯು ಜುಲೈ 27, 2026ರ 7ನೇ ಕರಡು ಅಧಿಸೂಚನೆಯನ್ನು ಇದ್ದಂತೆಯೇ ಒಪ್ಪದಿರಲು ಸರ್ವಾನುಮತದಿಂದ ತೀರ್ಮಾನಿಸಿದೆ. ಅಲ್ಲದೆ, ಕರಡು ಅಧಿಸೂಚನೆಯಲ್ಲಿ ಬಗರ್ ಹುಕುಂ, ಅರಣ್ಯ ಹಕ್ಕು, ಡೀಮ್ಡ್ ಫಾರೆಸ್ಟ್, ಭೂ ಮಂಜೂರಾತಿ, ಮೇಲ್ಮನವಿ ಮತ್ತು ನ್ಯಾಯಾಂಗ ಪ್ರಕರಣಗಳನ್ನು ಪರಿಗಣಿಸಿಲ್ಲ ಹಾಗೂ ಜನರಿಗೆ ಪರ್ಯಾಯ ಜೀವನೋಪಾಯಕ್ಕಾಗಿ ವಿಶೇಷ ಆರ್ಥಿಕ ನೆರವು ನೀಡುವ ಪ್ರಸ್ತಾಪವೂ ಇಲ್ಲ ಎಂದು ತಿಳಿಸಲಾಗಿದೆ.

**ರಾಜ್ಯ ಸರ್ಕಾರದ ಪ್ರಮುಖ ಆಗ್ರಹಗಳು:**

ಇಎಸ್‌ಎ ವ್ಯಾಪ್ತಿಗೆ ಕೇವಲ ಅಧಿಸೂಚಿತ ಅರಣ್ಯ ಪ್ರದೇಶಗಳು ಮತ್ತು ಇತರೆ ಅರಣ್ಯ ಪ್ರದೇಶಗಳನ್ನು ಮಾತ್ರ ಸೇರಿಸಬೇಕು (ಈಗಾಗಲೇ ಮಂಜೂರಾದ ಪ್ರದೇಶ ಹೊರತುಪಡಿಸಿ).

ಕೃಷಿ ಭೂಮಿ, ತೋಟಗಾರಿಕೆ/ಪ್ಲಾಂಟೇಶನ್, ಜನವಸತಿ ಮತ್ತು ಸಾರ್ವಜನಿಕ ಚಟುವಟಿಕೆಯ ಪ್ರದೇಶಗಳನ್ನು ಯಾವುದೇ ಕಾರಣಕ್ಕೂ ಸೇರಿಸಬಾರದು.

ಬಗರ್ ಹುಕುಂ, ಅರಣ್ಯ ಹಕ್ಕು, ಡೀಮ್ಡ್ ಫಾರೆಸ್ಟ್, ಭೂ ಮಂಜೂರಾತಿ, ಮೇಲ್ಮನವಿ ಮತ್ತು ನ್ಯಾಯಾಂಗ ಪ್ರಕರಣಗಳನ್ನು ಪರಿಗಣಿಸಬೇಕು. ತಜ್ಞ ಸಮಿತಿಯಿಂದ ಭೌತಿಕವಾಗಿ ಅರಣ್ಯ ಗಡಿ, ಜನವಸತಿ, ಪರಿಸರ ಸೂಕ್ಷ್ಮ ಪ್ರದೇಶಗಳು ಮತ್ತು ಕೃಷಿ ಚಟುವಟಿಕೆ ಪ್ರದೇಶಗಳನ್ನು ಸರ್ವೇ ನಂಬರ್‌ವಾರಾಗಿ ಅಳತೆ ಮಾಡಿ ಪ್ರತ್ಯೇಕವಾಗಿ ಗುರುತಿಸಬೇಕು.

ರೈತರು ಹಾಗೂ ಕಾರ್ಮಿಕರಿಗೆ ಪರ್ಯಾಯ ಜೀವನೋಪಾಯ ಮತ್ತು ಆರ್ಥಿಕ ನೆರವು ನೀಡಲು ಸೂಕ್ತ ಮಾರ್ಗಸೂಚಿ ರೂಪಿಸಬೇಕು.

**ಉನ್ನತ ಮಟ್ಟದ ಸಮಿತಿ ರಚನೆ:**

ವರದಿಯ ನ್ಯೂನತೆಗಳನ್ನು ಸರಿಪಡಿಸಿ ಸೂಕ್ತ ಮಾರ್ಪಾಡುಗಳನ್ನು ಸೂಚಿಸಲು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲು ಸರ್ಕಾರ ನಿರ್ಧರಿಸಿದೆ. ಈ ಸಮಿತಿಯಲ್ಲಿ ಕಂದಾಯ ಅಧಿಕಾರಿಗಳು, ಅರಣ್ಯಾಧಿಕಾರಿಗಳು, ರೈತ ಸಮುದಾಯದ ಪ್ರತಿನಿಧಿಗಳು, ಕೈಗಾರಿಕಾ ಉದ್ಯಮಗಳ ಪ್ರತಿನಿಧಿಗಳು ಹಾಗೂ ಅರಣ್ಯ-ಪರಿಸರ ವಿಷಯಗಳ ತಜ್ಞರು/ವಿಜ್ಞಾನಿಗಳು ಇರಲಿದ್ದಾರೆ. ರಾಜ್ಯ ಸರ್ಕಾರವು ಭೌತಿಕವಾಗಿ ಸರ್ವೇ ನಂಬರ್‌ವಾರು ಅಳತೆ ಮಾಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು, ಭಾರತ ಸರ್ಕಾರಕ್ಕೆ 1 ವರ್ಷದ ಕಾಲಾವಕಾಶ ನೀಡುವಂತೆ ಮನವಿ ಮಾಡಲು ನಿರ್ಧರಿಸಿದೆ.

### ಅಕ್ಟೋಬರ್ 23 ರಂದು ಮತದಾನ | 27ರಂದು ಮತ ಎಣಿಕೆ ಫಲಿತಾಂಶ

## ಪರಿಷತ್, ಶಿಕ್ಷಕರ ಕ್ಷೇತ್ರದ ಚುನಾವಣೆ ನಿಗದಿ

**ಬೆಂಗಳೂರು:** ಕರ್ನಾಟಕ ವಿಧಾನ ಪರಿಷತ್ತಿನ ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಕ್ಷೇತ್ರಗಳು ಸೇರಿದಂತೆ ಒಟ್ಟು ನಾಲ್ಕು ಸ್ಥಾನಗಳಿಗೆ ಭಾರತ ಚುನಾವಣಾ ಆಯೋಗವು ದ್ವೈವಾರ್ಷಿಕ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಅಕ್ಟೋಬರ್ 23 ರಂದು ಮತದಾನ ನಡೆಯಲಿದ್ದು, ಅಕ್ಟೋಬರ್ 27 ರಂದು ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ. ಕರ್ನಾಟಕದ ಹಾಲಿ ನಾಲ್ವರು ವಿಧಾನ ಪರಿಷತ್ ಸದಸ್ಯರ ಅಧಿಕಾರಾವಧಿಯು 2026ರ ನವೆಂಬರ್ 11ರಂದು ಮುಕ್ತಾಯಗೊಳ್ಳಲಿದ್ದು, ತೆರವಾಗಲಿರುವ ಈ ಸ್ಥಾನಗಳನ್ನು ಭರ್ತಿ ಮಾಡಲು ಚುನಾವಣೆ ನಡೆಸಲಾಗುತ್ತಿದೆ. ಈ ಕ್ಷೇತ್ರಗಳಲ್ಲಿ ಇಂದಿನಿಂದಲೇ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ.

**ಇತರೆ ಮೂರು ರಾಜ್ಯಗಳಲ್ಲಿಯೂ ಚುನಾವಣೆ:** ಕರ್ನಾಟಕದ 4 ಸ್ಥಾನಗಳ ಜೊತೆಗೆ ಬಿಹಾರದ 8 (4 ಪದವೀಧರ, 4 ಶಿಕ್ಷಕರ ಕ್ಷೇತ್ರ), ಮಹಾರಾಷ್ಟ್ರದ 5 (3 ಪದವೀಧರ, 2 ಶಿಕ್ಷಕರ ಕ್ಷೇತ್ರ) ಹಾಗೂ ಉತ್ತರ ಪ್ರದೇಶದ 11 (5 ಪದವೀಧರ, 6 ಶಿಕ್ಷಕರ ಕ್ಷೇತ್ರ) ವಿಧಾನ ಪರಿಷತ್ ಸ್ಥಾನಗಳಿಗೂ ಇದೇ ದಿನಾಂಕಗಳಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗದ ಕಾರ್ಯದರ್ಶಿ ಸುಮನ್ ಕುಮಾರ್ ದಾಸ್ ತಿಳಿಸಿದ್ದಾರೆ.

## ಸರಕಾರಿ ವಾಹನ, ಅತಿಥಿ ಗೃಹಗಳು ಡಿಸಿ ಅಧೀನಕ್ಕೆ

**ಸತ್ಯಮಿಥ್ಯ ಸುದ್ದಿಮೂಲ ಗದಗ**

ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಚುನಾವಣೆಯು ಅಕ್ಟೋಬರ್-2026 ತಿಂಗಳಲ್ಲಿ ಜರುಗಲಿದೆ. ಈ ಕುರಿತು ದಿನಾಂಕ 22-9-2026 ರಿಂದ ಚುನಾವಣಾ ನೀತಿ ಸಂಹಿತೆಯು ಜಾರಿಗೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ , ತಾಲೂಕು ಪಂಚಾಯತ್, ನಗರಾಭಿವೃದ್ಧಿ ಪ್ರಾಧಿಕಾರ, ವಿವಿಧ ನಿಗಮ/ ಮಂಡಳಿಗಳಿಗೆ ಸಹಕಾರ ಸಂಘಗಳ ಮತ್ತು ಉದ್ದಿಮೆಗಳ ಅಧಿಕಾರೇತರರಿಗೆ ಒದಗಿಸಲಾದ ಸರಕಾರಿ ವಾಹನಗಳನ್ನು ತಕ್ಷಣದಿಂದ ಹಿಂದಕ್ಕೆ ಪಡೆಯಲಾಗಿದೆ. ಅವುಗಳನ್ನು ಆಯಾ ತಾಲೂಕಿನ ತಹಶೀಲದಾರ ವಶಕ್ಕೆ ಚುನಾವಣಾ ಪ್ರಕ್ರಿಯೆ ಮುಗಿಯುವವರಗೆ ನೀಡತಕ್ಕದ್ದು. ಗದಗ ತಾಲೂಕಿನ ವಾಹನಗಳನ್ನು ತಹಶೀಲ್ದಾರರು ಈ ಕಾರ್ಯಾಲಯಕ್ಕೆ ಒಪ್ಪಿಸಬೇಕು. ಈ ಬಗ್ಗೆ ಎಲ್ಲ ತಹಶೀಲ್ದಾರರು ವರದಿ ಸಲ್ಲಿಸಬೇಕು.

ಜಿಲ್ಲೆಯಲ್ಲಿನ ಎಲ್ಲ ನಿರೀಕ್ಷಣಾ ಮಂದಿರಗಳು, ಪ್ರವಾಸಿ ಮಂದಿರಗಳು, ನಿಗಮಗಳ ಅತಿಥಿ ಗೃಹಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೆ ಜಿಲ್ಲಾಧಿಕಾರಿಗಳ ಅಧೀನಕ್ಕೆ ಪಡೆದುಕೊಳ್ಳಲಾಗಿದೆ. ತಹಶೀಲ್ದಾರರು ತಮ್ಮ ತಾಲೂಕಿನಲ್ಲಿರುವ ಮೇಲ್ಕಾಣಿಸಿದ ಕಟ್ಟಡಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು ವರದಿ ಸಲ್ಲಿಸತಕ್ಕದ್ದು. ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಇಲ್ಲದೇ ಯಾವುದೇ ಉದ್ದೇಶಕ್ಕೆ ನೀಡಬಾರದೆಂದು ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ಸತ್ಯಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
SATYA MITHI
Kannada Daily Morning

# ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಎಸ್.ಎಂ. ಭೂಮರೆಡ್ಡಿ ಕಾಲೇಜು ವಿದ್ಯಾರ್ಥಿಗಳ ಸಾಧನೆ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ನಗರದ ಎಸ್.ಎಂ. ಭೂಮರಡ್ಡಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ವಿವಿಧ ವೈಯಕ್ತಿಕ ಹಾಗೂ ಗುಂಪು ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಿ, ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆಯಾಗುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಬಾಲಕರ ವೈಯಕ್ತಿಕ ವಿಭಾಗದಲ್ಲಿ ಮುತ್ತುರಾಜ ಕಾಡದ 110 ಮೀ. ಹರ್ಡಲ್ಸ್‌ನಲ್ಲಿ ಪ್ರಥಮ ಹಾಗೂ 400 ಮೀ. ಹರ್ಡಲ್ಸ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಯಶವಂತ 5 ಕಿ.ಮೀ. ನಡಿಗೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ವಿನಾಯಕ ಜಿಗಳೂರ ಕೋಲು ನಡಿಗೆಯಲ್ಲಿ ಪ್ರಥಮ ಸ್ಥಾನ ಪಡೆದರೆ, ಶಿವಕುಮಾರ ಕಮತರ್ 100 ಮೀ. ಓಟದಲ್ಲಿ ದ್ವಿತೀಯ ಹಾಗೂ ಮುತ್ತುರಾಜ ಕಾಡದ ಜಾವೆಲಿನ್ ಥ್ರೋನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಸಂಜಯ ಹನುಮರ ರಾಚಪ್ಪ ಚಳಗೇರಿ ಅವರು ಗುಡ್ಡಗಾಡು ಓಟದಲ್ಲಿ ಉತ್ತಮ ಸಾಧನೆ ಮಾಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಮುತ್ತುರಾಜ ಕಾಡದ, ಮಹಮ್ಮದ್ ಇಮ್ರಾನ್ ಹಾಗೂ ಇತರರು ಕುಸ್ತಿ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಗವಿಸಾಬ್ ನಿಶಾನ್ದಾರ್ ಉದ್ದ ಜಿಗಿತದಲ್ಲಿ ತೃತೀಯ, ಲೋಹಿತಕುಮಾರ ಹಿರೇಮನಿ 5 ಕಿ.ಮೀ. ನಡಿಗೆಯಲ್ಲಿ ತೃತೀಯ, ವಿನಾಯಕ ಜಿಗಳೂರ ಎತ್ತರ ಜಿಗಿತದಲ್ಲಿ ತೃತೀಯ, ಶಿವರಾಜ ವಾರಿಕಲ್ ಕೋಲು ನಡಿಗೆಯಲ್ಲಿ ತೃತೀಯ ಹಾಗೂ ನಿರಂಜನ ತ್ರಿವಿಧ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಗುಂಪು ಕ್ರೀಡೆಗಳಲ್ಲಿ ಬಾಲಕರ ತಂಡವು ಬಾಲ್ ಬ್ಯಾಡ್ಮಿಂಟನ್, ಹಾಕಿ ಹಾಗೂ ಹ್ಯಾಂಡ್‌ಬಾಲ್‌ನಲ್ಲಿ ಪ್ರಥಮ ಸ್ಥಾನ ಪಡೆದು ಗಮನ ಸೆಳೆದಿದೆ.

ಬಾಲಕಿಯರಲ್ಲೂ ಉತ್ತಮ ಸಾಧನೆ:

ಬಾಲಕಿಯರು ಸಹ ವಿವಿಧ ಕ್ರೀಡಾ ವಿಭಾಗಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಸಂಗೀತಾ ಗೋನಾಳ ಕೋಲು ನಡಿಗೆಯಲ್ಲಿ ಪ್ರಥಮ, ಎತ್ತರ ಜಿಗಿತದಲ್ಲಿ ದ್ವಿತೀಯ ಹಾಗೂ ತ್ರಿವಿಧ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಕಾವೇರಿ ಮಾದರ 3000 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಕವಿತಾ ಚೋಟಿ 400 ಮೀ. ಅಡೆತಡೆ ಓಟದಲ್ಲಿ ದ್ವಿತೀಯ ಹಾಗೂ 100 ಮೀ. ಅಡೆತಡೆ ಓಟದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಕ್ರಾಸ್ ಕಂಟ್ರಿ (ಗುಡ್ಡಗಾಡು ಓಟ) ವಿಭಾಗದಲ್ಲಿ ಕಾವೇರಿ ಮಾದರ ಹಾಗೂ ಚೈತ್ರ ಗುಂಡೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ದ್ಯಾಮವ್ವ ತುಂಬದ ಕೋಲು ನಡಿಗೆಯಲ್ಲಿ ದ್ವಿತೀಯ ಹಾಗೂ ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಚಂದ್ರಿಕಾ ಅಂಗಡಿ, ಶರಣಮ್ಮ ಹೊರಪೇಟೆ, ವಿದ್ಯಾ, ಗೌರಮ್ಮ ತಳಕಲ್ ಹಾಗೂ ಚೈತ್ರ ಚೋಪಡೆ ಅವರು ಕುಸ್ತಿ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕಿಯರ ಗುಂಪು ಕ್ರೀಡೆಗಳಲ್ಲಿ ವಾಲಿಬಾಲ್, ಹ್ಯಾಂಡ್‌ಬಾಲ್ ಹಾಗೂ ಹಾಕಿ ತಂಡಗಳು ಪ್ರಥಮ ಸ್ಥಾನ ಪಡೆದು ಕಾಲೇಜಿನ ಕ್ರೀಡಾ ಸಾಮರ್ಥ್ಯವನ್ನು ಮತ್ತೊಮ್ಮೆ ಮೆರೆದಿವೆ.

ಕ್ರೀಡಾಕೂಟದಲ್ಲಿ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳನ್ನು ಗವಿವಿ ಸಂಘದ ಸಮಸ್ತ ಆಡಳಿತ ಮಂಡಳಿ ಸದಸ್ಯರಾದ ಡಾ. ಬಿ.ವ್ಹಿ. ಕಂಬಳ್ಯಾಳ,ಎ.ಎಫ್.ಹಿರೇಮಠ, ಪ್ರಶಾಂತ ಶಿವಪ್ಪ ಗೌಡರ, ಜಯಶ್ರೀ ಶಿವಪ್ಪ ಗೌಡರ, ಸುಧಾ ಟಿ.ಜೆ. ಪದವಿ ಕಾಲೇಜಿನ ಪ್ರಾಂಶುಪಾಲರಾದ ಎಸ. ಎನ್.ಶಿವರೆಡ್ಡಿ, ಪ್ರಾಂಶುಪಾಲರಾದ ಜಿ.ಬಿ.ಗುಡಿಮನಿ ಹಾಗೂ ಕಾಲೇಜಿನ ಸರ್ವ ಸಿಬ್ಬಂದಿ ಅಭಿನಂದಿಸಿ, ಜಿಲ್ಲಾ ಮಟ್ಟದಲ್ಲಿಯೂ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದ್ದಾರೆ.



# ನರೇಗಲ್ಲದಲ್ಲಿ ಮಳೆ–ಗಾಳಿ ಅಬ್ಬರ; ಮರ, ವಿದ್ಯುತ್ ಕಂಬಗಳು ಧರೆಗೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಕಳೆದ ಹಲವು ದಿನಗಳಿಂದ ಮಳೆಗಾಗಿ ಕಾದು ಕುಳಿತಿದ್ದ ನರೇಗಲ್ಲ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಸೋಮವಾರ ಸುರಿದ ಭಾರಿ ಮಳೆ ಕೊಂಚ ನೆಮ್ಮದಿ ತಂದಿದೆ. ಆದರೆ, ಮಳೆಯೊಂದಿಗೆ ಬೀಸಿದ ಬಿರುಗಾಳಿಯಿಂದ ಪಟ್ಟಣದಲ್ಲಿ ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗೆ ಬಿದ್ದು ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.



ರವಿವಾರ ಮಳೆ ಬರುವ ಮುನ್ಸೂಚನೆ ನೀಡಿದ್ದ ಮಳೆರಾಯ, ಸೋಮವಾರ ಮಧ್ಯಾಹ್ನದ ಬಳಿಕ ಸುಮಾರು ನಾಲ್ಕು ಗಂಟೆಗಳ ಕಾಲ ಧೋ ಎಂದು ಸುರಿದು ತನ್ನ ಅಬ್ಬರ ತೋರಿಸಿದ. ಮಳೆಯೊಂದಿಗೆ ಬೀಸಿದ ಬಿರುಗಾಳಿಗೆ ಪಟ್ಟಣ ಪಂಚಾಯಿತಿ ಎದುರಿನ ಮರ ಹಾಗೂ ಕೊಂತಿ ಮಲ್ಲಪ್ಪನ ದೇವಸ್ಥಾನದ ಬಳಿಯಿದ್ದ ಮರಗಳು ನೆಲಕ್ಕುರುಳಿದವು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳ ಮಾಹಿತಿ ಮೇರೆಗೆ ಅರಣ್ಯ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ತೆರಳಿ ಧರೆಗೆ ಬಿದ್ದ ಮರಗಳನ್ನು ತೆರವುಗೊಳಿಸಿದರು. ಮರಗಳು ರಸ್ತೆಯ ಮೇಲೆ ಬೀಳದೆ ರಸ್ತೆ ಬದಿಗೆ ಉರುಳಿದ್ದರಿಂದ ವಾಹನ ಸಂಚಾರಕ್ಕೆ ಯಾವುದೇ ಅಡಚಣೆಯಾಗಲಿಲ್ಲ.

ಬಿರುಗಾಳಿಯ ಅಬ್ಬರಕ್ಕೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂರು ವಿದ್ಯುತ್ ಕಂಬಗಳು ಹಾಗೂ ಒಳಕೋಟಿ ಓಣಿಯಲ್ಲಿ ಮೂರು ಕಂಬಗಳು ಮುರಿದು ಬಿದ್ದಿವೆ ಎಂದು ಶಾಖಾಧಿಕಾರಿ ಸರ್ವಿ ತಿಳಿಸಿದ್ದಾರೆ. ಈಗಾಗಲೇ ದುರಸ್ತಿ ಕಾರ್ಯ ಕೈಗೊಳ್ಳಲಾಗಿದ್ದು, ಅಲ್ಲಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಇದೇ ವೇಳೆ ಕೋಡಿಕೊಪ್ಪದ ಜೋಡು ರಸ್ತೆಯಲ್ಲಿ ಮುತ್ತಣ್ಣ ಪಲ್ಲೇದ ಅವರ ಮನೆಯ ಎದುರು ನಡೆಯುತ್ತಿರುವ ರಸ್ತೆ ದುರಸ್ತಿ ಕಾಮಗಾರಿಯ ಅವ್ಯವಸ್ಥೆಯೂ ಮಳೆಯಿಂದ ಬಹಿರಂಗಗೊಂಡಿದೆ. ಎರಡು ದೊಡ್ಡ ಗುಂಡಿಗಳನ್ನು ಜೋಡಿಸುವ ರಸ್ತೆಯ ಮೇಲೆಯೇ ಬೃಹತ್ ಕಂದಕ ನಿರ್ಮಾಣವಾಗಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುವ ಆತಂಕ ಎದುರಾಗಿದೆ. ಈ ಹಿಂದೆ ಕಾಮಗಾರಿ ನಡೆಸಿದವರು ಎರಡು ಗುಂಡಿಗಳನ್ನು ಜೋಡಿಸುವ ಅಡ್ಡ ಚರಂಡಿಗೆ ಸಿಮೆಂಟ್ ಪೈಪ್ ಅಥವಾ ಸಿಡಿ ಅಳವಡಿಸಿ ಮುಚ್ಚುವ ಬದಲು ತಗಡಿನ ಬ್ಯಾರಲ್‌ಗಳಿಂದ ಮುಚ್ಚಿರುವುದು ಕಂಡುಬಂದಿದೆ. ಇದರಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ಸಾರ್ವಜನಿಕರು ಪ್ರಶ್ನೆ ಎತ್ತಿದ್ದಾರೆ.

"ಈ ರೀತಿಯ ಅವೈಜ್ಞಾನಿಕ ಕಾಮಗಾರಿಯಿಂದ ಸಾರ್ವಜನಿಕರ ಹಣ ವ್ಯರ್ಥವಾಗುವುದಲ್ಲದೆ, ಕಾಮಗಾರಿಯೂ ಶಾಶ್ವತವಾಗುವುದಿಲ್ಲ. ಸಂಬಂಧಿಸಿದ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು" ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಜೈ ಭೀಮನಗರದಲ್ಲಿ 5ನೇ ವರ್ಷದ ಶ್ರೀ ಗಣೇಶ ಪ್ರತಿಷ್ಠಾಪನೆ

**ಗಂಗಾವತಿ:** ನಗರದ 28ನೇ ವಾರ್ಡ್‌ನ ಜೈ ಭೀಮನಗರದಲ್ಲಿ ಶ್ರೀ ಭೀಮರಾವ್ ಯುವಕ ಸಂಘದ ವತಿಯಿಂದ 5ನೇ ವರ್ಷದ ಶ್ರೀ ಗಣೇಶ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ನೆರವೇರಿಸಲಾಯಿತು.

ಗಣೇಶ ಮೂರ್ತಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ಆರತಿ ಸಲ್ಲಿಸಿ, ಸಾರ್ವಜನಿಕರ ಒಳಿತಿಗಾಗಿ, ಬಡಾವಣೆಯ ಅಭಿವೃದ್ಧಿಗಾಗಿ ಹಾಗೂ ನಾಡಿನಲ್ಲಿ ಸುಭಿಕ್ಷೆ, ಶಾಂತಿ ಮತ್ತು ಸಮೃದ್ಧಿ ನೆಲೆಸಲಿ ಎಂದು ಪ್ರಾರ್ಥಿಸಲಾಯಿತು. ಈ ಸಂದರ್ಭದಲ್ಲಿ ಬಡಾವಣೆಯ ಸಾರ್ವಜನಿಕರು, ಯುವಕರು ಹಾಗೂ ಮುಖಂಡರು ಪಾಲ್ಗೊಂಡು ಶ್ರೀ ಗಣೇಶನ ದರ್ಶನ ಪಡೆದು ಪೂಜೆ ಸಲ್ಲಿಸಿದರು. ನಂತರ ಮಾತನಾಡಿದ ಸಂಗಪ್ಪ ಮಳೆಮನಿ, ಜೈ ಭೀಮನಗರದಲ್ಲಿ ಶ್ರೀ ಭೀಮರಾವ್ ಯುವಕ ಸಂಘದ ವತಿಯಿಂದ ಕಳೆದ ಐದು ವರ್ಷಗಳಿಂದ ನಿರಂತರವಾಗಿ ಗಣೇಶ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಸವರಾಜ, ಅಯ್ಯಪ್ಪ, ಪಂಪಾಪತಿ, ಸುರೇಶ್ ಮಳೆಮನಿ, ಮಂಜುನಾಥ ಮಳೆಮನೆ, ಅಜಯ ಎ. ಬಸವರಾಜ, ಬಸವರಾಜ ಡಿ. ಪಂಪಾಪತಿ, ಮೌನೇಶ, ಸುರೇಶ್, ಷಣ್ಮುಖ, ಆನಂದ ಸೇರಿದಂತೆ ಯುವಕ ಸಂಘದ ಸದಸ್ಯರು, ಬಡಾವಣೆಯ ಮುಖಂಡರು ಇದ್ದರು.

# ಎಸ್‌ಎಸ್‌ಎಲ್‌ಸಿ ಗುಣಾತ್ಮಕ ಫಲಿತಾಂಶ ಹೆಚ್ಚಿಸಲು ಮುಖ್ಯ ಶಿಕ್ಷಕರಿಗೆ ಒಂದು ದಿನದ ವಿಶೇಷ ಶಿಬಿರ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಜಿಲ್ಲೆಯ ಪ್ರೌಢಶಾಲೆಗಳ ಎಸ್‌ಎಸ್‌ಎಲ್‌ಸಿ ಗುಣಾತ್ಮಕ ಫಲಿತಾಂಶವನ್ನು ಹೆಚ್ಚಿಸುವ ಉದ್ದೇಶದಿಂದ ಜಿಲ್ಲೆಯ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗಾಗಿ ಒಂದು ದಿನದ ವಿಶೇಷ ಶಿಬಿರವನ್ನು ನಗರದ ಡಂಬಳನಾಕಾದಲ್ಲಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದಲ್ಲಿ ಸೋಮವಾರ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಿಡಿಪಿಐ ಆರ್. ಎಸ್. ಬುರಡಿ ಅವರು "ಮಕ್ಕಳ ಸುರಕ್ಷತೆಯೊಂದಿಗೆ ಗುಣಮಟ್ಟದ ಶಿಕ್ಷಣ" ಎಂಬ ಆಶಯದೊಂದಿಗೆ ಮಾತನಾಡಿ, ಈ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಇನ್ನಷ್ಟು ಗುಣಾತ್ಮಕವಾಗಿ ಸುಧಾರಿಸಲು ಎಲ್ಲರೂ ಸಂಘಟಿತವಾಗಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಸಂಕಲನಾತ್ಮಕ ಪರೀಕ್ಷೆ –1 ಸಂಬಂಧಿಸಿದ ಎಸ್ ಓ ಪಿ ಪ್ರತಿ ಮಗುವಿನ ಕಲಿಕೆಯ ಪ್ರಗತಿಯ ದಾಖಲಾತಿ, ಮಿಷನ್ 60+, ಕಲಿಕಾ ಕೊರತೆ ಹಾಗೂ ಹೆಚ್ಚುವರಿ ಬೆಂಬಲದ ಅಗತ್ಯವಿರುವ ಮಕ್ಕಳಿಗಾಗಿ ವಿಶೇಷ ಕ್ರಮಗಳು, ನಿಧಾನ ಕಲಿಕೆಯ ಮಕ್ಕಳಿಗೆ ಅಗತ್ಯವಾದ ಶೈಕ್ಷಣಿಕ ಬೆಂಬಲ, ಮನೆ ಭೇಟಿ ಮತ್ತು 'ಓದು ಮನೆ' ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ತಿಳಿಸಿದರು. ಜಿಲ್ಲೆಯ ಕೆಪಿಎಸ್ ಹಾಗೂ ಪಿ ಎಂ ಮಾದರಿ ಶಾಲೆಗಳು ಉತ್ತಮ ಕಲಿಕಾ ವಾತಾವರಣ ನಿರ್ಮಿಸಿ ಇತರ ಶಾಲೆಗಳಿಗೆ ಮಾದರಿಯಾಗಬೇಕು. ಶಾಲೆಗಳಲ್ಲಿ ಕೌಶಲ್ಯ ಶಿಕ್ಷಣ, ಮೌಲ್ಯ ಶಿಕ್ಷಣ, ಮಕ್ಕಳ ಸುರಕ್ಷತೆ, ಬಾಲ್ಯ ವಿವಾಹ ತಡೆ, ಫೋಕ್ಸೊ ಕಾಯ್ದೆ, ಮಹಿಳೆಯರಿಗಾಗಿ ದೂರು ನಿವಾರಣಾ ಸಮಿತಿ, ನಶಾಮುಕ್ತ ಶಾಲಾ ವಾತಾವರಣ, ಹಾಗೂ ನಿರಂತರ ಹಾಜರಾತಿ ಕುರಿತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದರು. ಪ್ರತಿ ಮಗುವಿನ ಕಲಿಕೆಯ ಮೇಲೆ ವೈಯಕ್ತಿಕ ಗಮನಹರಿಸುವ ಮೂಲಕ "ಮಕ್ಕಳ ಭವ್ಯ ಭವಿಷ್ಯಕ್ಕಾಗಿ ಗುಣಮಟ್ಟದ ಶಿಕ್ಷಣ" ನೀಡಬೇಕು. ಈ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಕರಾವಳಿ ಭಾಗದ ಜಿಲ್ಲೆಗಳಿಗಿಂತ ಗುಣಾತ್ಮಕವಾಗಿ ಮೀರಿಸುವ ಗುರಿಯೊಂದಿಗೆ ಎಲ್ಲರೂ ಪಣತೊಟ್ಟು ಕಾರ್ಯನಿರ್ವಹಿಸಬೇಕು ಎಂದು ಅವರು ಹೇಳಿದರು.

ಜಿಲ್ಲೆಯ ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ ಎಚ್. ಬಿ. ರೆಡ್ಡರ ಅವರು, ಸಂಕಲನಾತ್ಮಕ ಪರೀಕ್ಷೆ –1 ಹಾಗೂ ಅರ್ಧವಾರ್ಷಿಕ ಪರೀಕ್ಷೆಗೆ ಸಂಬಂಧಿಸಿದ ಕಾರ್ಯಾಚರಣೆ ಮಾರ್ಗಸೂಚಿ ಗಳನ್ನು ಹಾಗೂ ಪಿಪಿಟಿ ಮೂಲಕ ಪರೀಕ್ಷಾ ಸಿದ್ಧತೆ, ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಮತ್ತು ಫಲಿತಾಂಶ ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಿದರು.

ಸಮಗ್ರ ಶಿಕ್ಷಣ ಕರ್ನಾಟಕದ ಎಪಿಸಿಓ ರವರಾದ ಶಿವಕುಮಾರ ಕುರಿಯವರ ಅವರು ಸಮಗ್ರ ಶಿಕ್ಷಣ ಕರ್ನಾಟಕದ ವಿವಿಧ ಚಟುವಟಿಕೆಗಳು, ಇಎಲ್ ಸಿ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಕುರಿತು ಮಾಹಿತಿ ನೀಡಿದರು.

ಉಪನ್ಯಾಸಕ ಕೊಟ್ರೇಶ್ ವಿಭೂತಿ, ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮದಡಿ ನಡೆಯುವ ವಿವಿಧ ಸ್ಪರ್ಧೆಗಳ ಕುರಿತು ಮಾಹಿತಿ ನೀಡಿದರು. ಶ್ರೀಮತಿ ಸುಧಾ ಬನ್ನಿಕಲ್ ಅವರು ಎಫ್ ಎಲ್ ಎನ್ ಕುರಿತು ಹಾಗೂ ಬಿ. ಎಫ್. ಅರವಟಗಿ ಅವರು ವೃತ್ತಿ ಮಾರ್ಗದರ್ಶನ ಕುರಿತು ಮಾರ್ಗದರ್ಶನ ನೀಡಿದರು.

ರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಯಟ್ ಪ್ರಾಂಶುಪಾಲ ಕೆ. ಡಿ. ಬಡಿಗೇರ ಅವರು ಜನಸಂಖ್ಯೆಯಲ್ಲಿನ ಸಂತಾನೋತ್ಪತ್ತಿ ಪ್ರಮಾಣ ಇಳಿಕೆ, ಶಾಲೆಯಿಂದ ಹೊರಗುಳಿದ ಮಕ್ಕಳ ಸಮಸ್ಯೆ ಹಾಗೂ ಅವರನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಮನೆ ಭೇಟಿ, ಓದು ಮನೆ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಗತ್ಯವನ್ನು ವಿವರಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಜಯಂತಿ ಅಕ್ಕನವರು ಮಾನವೀಯ ಮೌಲ್ಯ, ನೈತಿಕ ಮೌಲ್ಯ, ಆಧ್ಯಾತ್ಮಿಕ ಮೌಲ್ಯ ಹಾಗೂ ದೈವೀ ಮೌಲ್ಯಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಇಲಾಖೆಯ ಶ್ರೀ ಎಂ. ಎಚ್. ಕಂಬಳಿ ಡಿವೈ ಪಿಸಿ ( ಕಾರ್ಯಕ್ರಮ), ಶ್ರೀ ರವಿಪ್ರಕಾಶ್ ಎಸ್ ಎನ್ ( ಗುಣಮಟ್ಟ ), ಎಸ್ ಎನ್ ಪಾಟೀಲ ಸೇರಿದಂತೆ ಜಿಲ್ಲೆಯ ಸುಮಾರು 320ಕ್ಕೂ ಅಧಿಕ ಪ್ರೌಢಶಾಲಾ ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು. "ಉತ್ತಮ ಕಲಿಕೆ– ಉಜ್ವಲ ಭವಿಷ್ಯ" ಎಂಬ ಆಶಯದೊಂದಿಗೆ, ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಪ್ರಗತಿಯನ್ನು ಖಚಿತಪಡಿಸಿ, ಗುಣಾತ್ಮಕ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸಾಧಿಸುವ ಸಂಕಲ್ಪದೊಂದಿಗೆ ಶಿಬಿರ ಮುಕ್ತಾಯವಾಯಿತು.



# ಜಿಲ್ಲಾ ಮಟ್ಟದ ಕುಸ್ತಿಯಲ್ಲಿ ಪ್ರಥಮ: ರಾಜ್ಯ ಮಟ್ಟಕ್ಕೆ ಆಯ್ಕೆ

**ಸತ್ಯಮಿಥ್ಯ ಸುದ್ದಿಮೂಲ ಮುಗಳಖೋಡ:**
ಇತ್ತೀಚಿಗೆ ಸಾರ್ವಜನಿಕ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ವತಿಯಿಂದ ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಕವಲಗುಡ್ಡದಲ್ಲಿ ನಡೆದ ಜಿಲ್ಲಾ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಪಟ್ಟಣದ ಶ್ರೀ ಹನುಮಾನ ಶಿಕ್ಷಣ ಸಂಸ್ಥೆಯ, ಅನುದಾನಿತ ಶಿವಶಕ್ತಿ ಕನ್ನಡ ಮಾದ್ಯಮ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಹನಮಂತ ಕರೆಪ್ಪ ಜಮಖಂಡಿ 38 ಕೆಜಿಯ ಫ್ರೀ ಸ್ಟೈಲ್ ಕುಸ್ತಿ ವಿಭಾಗದಲ್ಲಿ ಬಾಗವಹಿಸಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ, ಶಾಲೆಯ ಇತಿಹಾಸದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಪ್ರಪ್ರಥಮ ವಿದ್ಯಾರ್ಥಿ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ.

ಸಾಧನೆ ಮಾಡಿದ ವಿದ್ಯಾರ್ಥಿಗೆ ಸಂಸ್ಥೆಯ ಅಧ್ಯಕ್ಷ ರಮೇಶ ಖೇತಗೌಡರ, ಮುಖ್ಯಗುರು ಅನಿಲಕುಮಾರ ಕಾಮಗೌಡರ, ಮಾರ್ಗದರ್ಶಕ ಪುಂಡಲೀಕ ಕಡಕೋಳ, ಹಾಲಪ್ಪ ಶೇಗುಣಸಿ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿ ಶುಭ ಹಾರೈಸಿದ್ದಾರೆ.



# ಆಲಗೂರಿನಲ್ಲಿ ಸ್ವಾಸ್ಥ್ಯ ಸಂಕಲ್ಪ; ಆರೋಗ್ಯವೇ ಬದುಕಿನ ನಿಜವಾದ ಸಂಪತ್ತು

**ಸತ್ಯಮಿಥ್ಯ ಸುದ್ದಿಮೂಲ ಸಾವಳಗಿ:**
ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಇಂದಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನಶೈಲಿ, ಅಸಮರ್ಪಕ ಆಹಾರ ಪದ್ಧತಿ ಹಾಗೂ ಸ್ವಚ್ಛತೆಯ ನಿರ್ಲಕ್ಷ್ಯದಿಂದ ವಿವಿಧ ಆರೋಗ್ಯ ಸಮಸ್ಯೆಗಳು ಎದುರಾಗುತ್ತಿವೆ. ಹೀಗಾಗಿ ವಿದ್ಯಾರ್ಥಿಗಳು ತಮ್ಮ ದೈನಂದಿನ ಬದುಕಿನಲ್ಲಿ ಉತ್ತಮ ಆರೋಗ್ಯ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಪಂಡಿತ್ ಪಾರ್ಶ್ವನಾಥ್ ಉಪಾಧ್ಯೆ ಎಂದು ಸಲಹೆ ನೀಡಿದರು.

ಜಮಖಂಡಿ ತಾಲೂಕಿನ ಆಲಗೂರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.) ವತಿಯಿಂದ ಆಲಗೂರಿನ ಶ್ರೀ ಮಹಾವೀರ ಅಲ್ಪಸಂಖ್ಯಾತರ ವಿದ್ಯಾವರ್ಧಕ ಹೈಸ್ಕೂಲ್‌ನಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಕಾರ್ಯಕ್ರಮದಲ್ಲಿ ಮಾತನಾಡಿ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಆರೋಗ್ಯಕರ ಜೀವನಶೈಲಿಯ ಅರಿವು ಅತ್ಯಗತ್ಯವಾಗಿದ್ದು, ವಿದ್ಯಾರ್ಥಿ ದೆಸೆಯಿಂದಲೇ ಉತ್ತಮ ಆಹಾರ ಪದ್ಧತಿ, ಸ್ವಚ್ಛತೆ ಹಾಗೂ ಶಿಸ್ತುಬದ್ಧ ಜೀವನವನ್ನು ರೂಢಿಸಿಕೊಳ್ಳಬೇಕು ಎಂಬ ಸಂದೇಶದೊಂದಿಗೆ ಆರೋಗ್ಯಕರ ಆಹಾರ ಸೇವನೆ, ವೈಯಕ್ತಿಕ ಸ್ವಚ್ಛತೆ, ಶುದ್ಧ ಕುಡಿಯುವ ನೀರಿನ ಬಳಕೆ, ನಿಯಮಿತ ವ್ಯಾಯಾಮ ಹಾಗೂ ಸಾಕಷ್ಟು ವಿಶ್ರಾಂತಿಗೆ ಆದ್ಯತೆ ನೀಡಬೇಕು. ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು. ಮೊಬೈಲ್ ಹಾಗೂ ಇತರೆ ಡಿಜಿಟಲ್ ಸಾಧನಗಳ ಅತಿಯಾದ ಬಳಕೆಯನ್ನು ನಿಯಂತ್ರಿಸಿಕೊಂಡು, ಓದು, ಕ್ರೀಡೆ ಹಾಗೂ ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಯುವಜನತೆ ಯಾವುದೇ ರೀತಿಯ ದುಶ್ಚಟಗಳಿಗೆ ಒಳಗಾಗದೆ, ಆರೋಗ್ಯಕರ ಮತ್ತು ಶಿಸ್ತುಬದ್ಧ ಜೀವನ ನಡೆಸುವ ಸಂಕಲ್ಪ ಮಾಡಬೇಕು. ವಿದ್ಯಾರ್ಥಿಗಳಲ್ಲಿ ಆರೋಗ್ಯದ ಕುರಿತು ಅರಿವು ಮೂಡಿಸುವ ಇಂತಹ ಕಾರ್ಯಕ್ರಮಗಳು ಉತ್ತಮ ಸಮಾಜ ನಿರ್ಮಾಣಕ್ಕೆ ಪೂರಕವಾಗಿವೆ ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಹಮ್ಮಿಕೊಂಡ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆರೋಗ್ಯ ಮತ್ತು ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ, ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮಹತ್ವವನ್ನು ಸಾರಿತು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳಾದ ರಜಪೂತ್, ಮೇಲ್ವಿಚಾರಕರಾದ ದಾದಾ ಖಲಂದರ್ ಶೇಖ, ಸೇವಾ ಪ್ರತಿನಿಧಿ ಸಾನಿಯಾ ನದಾಫ್ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಪುಟ್ಟರಾಜ ಗವಾಯಿಗಳು ಶಿವಯೋಗಿ ಸಾಧನೆ ಮಾಡಿದ್ದರಿಂದ ಶಿವಯೋಗಿಗಳಾದರು: ತೋಂಟದ ಸಿದ್ದರಾಮ ಶ್ರೀಗಳು

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ಪೂಜ್ಯಶ್ರೀ ಲಿಂ.ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳವರು ತಮ್ಮ ಇಡೀ ಬದುಕನ್ನು ಪರೋಪಕಾರ ಮತ್ತು ಸಮಾಜಸೇವೆಗಾಗಿ ಮೀಸಲಿಟ್ಟಿದ್ದರಿಂದ ಅವರ ಸಮರ್ಪಿತ ಬದುಕನ್ನು ನಾವೇಲ್ಲರೂ ಸ್ಮರಿಸುವಂತಾಗಿದೆ ಎಂದು ಗದುಗಿನ ತೋಂಟದಾರ್ಯ ಶ್ರೀಮಠದ ಪೂಜ್ಯಶ್ರೀ ಜ.ಡಾ.ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಹೇಳಿದರು.

ಅವರುನಗರದವಿರೇಶ್ವರಪುಣ್ಯಾಶ್ರಮದಲ್ಲಿಸೋಮವಾರಗಾನಯೋಗಿ ಡಾ.ಪಂ. ಪುಟ್ಟರಾಜ ಸೇವಾ ಸಮಿತಿ ವತಿಯಿಂದ ಪರಮಪೂಜ್ಯ ಪದ್ಮಭೂಷಣ ಡಾ. ಪಂ. ಪುಟ್ಟರಾಜ ಕವಿ ಶಿವಯೋಗಿಗಳವರ 16ನೇ ಪುಣ್ಯಸ್ಮರಣೋತ್ಸವ, ಶಿವಯೋಗಿ ಶ್ರೀ ಪುಟ್ಟರಾಜ ಪ್ರಶಸ್ತಿ ಪ್ರಧಾನ ಮತ್ತು ಸ್ವರ ನಮನ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವಹಿಸಿ ಅವರು ಮಾತನಾಡಿ, ಪಂ. ಪುಟ್ಟರಾಜರ ಗವಾಯಿಗಳವರನ್ನು ಸ್ಮರಿಸಿದರೆ ಜನ್ಮ ಸಾರ್ಥಕವಾಗುತ್ತದೆ. ಅವರು ಶಿವನೊಂದಿಗೆ ಅನುಸಂದಾನ ಮಾಡಿ ಶಿವಯೋಗಿಗಳಾಗಿದ್ದಾರೆ. ಶಿವನು ಬೇರೆಯಲ್ಲ ಶಿವಯೋಗಿ ಬೇರೆಯಲ್ಲ, ಲೋಕದ ಜನರ ಕಷ್ಟಗಳನ್ನು ಪರಿಹರಿಸಲು ಶಿವನ ರೂಪದಲ್ಲಿ ಶಿವಯೋಗಿಯಾಗಿ ಪುಟ್ಟರಾಜ ಗವಾಯಿಗಳು ನಮಗೆ ಕಾಣುತ್ತಾರೆ. ಅವರು ಅಂಧರಾಗಿದ್ದರೂ ಅಂತರಾಳದ ಕಣ್ಣುಗಳಿಂದ ಲೌಕಿಕ ಬದುಕನ್ನು ಕಂಡವರು. ಕಣ್ಣುಗಳಿದ್ದವರು ಮಾಡದ ಸಾಧನೆಯನ್ನುಪುಟ್ಟರಾಜರು ಮಾಡಿದ್ದಾರೆ. ಅವರ ಪುಣ್ಯಸ್ಮರಣೆ ಮಾಡಿ ಬರಿ ದಾಸೋಹ ಮಾಡದೆ, ಸಾಧಕರನ್ನು ಸನ್ಮಾನಿಸಿ ಗುರುಗಳನ್ನು ಅಜರಾಮವನ್ನಾಗಿಸುವ ಕೆಲಸವನ್ನು ಡಾ.ಪಂ. ಪುಟ್ಟರಾಜ ಸೇವಾ ಸಮಿತಿ ನಿರಂತರವಾಗಿ ಮಾಡುತ್ತಾ ಬಂದಿದೆ ಎಂದು ಹೇಳಿದರು.



ಗದಗ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾದ ವಾಸಣ್ಣ ಕುರುಡಗಿ ಅವರುಕಾರ್ಯಕ್ರಮವನ್ನುಉದ್ಘಾಟಿಸಿಮಾತನಾಡಿ,ಮಠಮಾನ್ಯಗಳು ಹೇಗಿರಬೇಕು ಎನ್ನುವದಕ್ಕೆ ವಿರೇಶ್ವರ ಪುಣ್ಯಾಶ್ರಮ ಮಾದರಿಯಾಗಿದೆ. ಸಾವಿರಾರು ಅಂಧ–ಅನಾಥ ಮಕ್ಕಳಿಗೆ ಬದುಕು ಕಟ್ಟಿಕೊಟ್ಟ ಪುಟ್ಟರಾಜ ಗವಾಯಿಗಳವರು ಲಿಂಗೈಕ್ಯರಾದ ದಿನದಂದು ಸೇರಿದ ಲಕ್ಷಾಂತರ ಭಕ್ತರ ಉಪಸ್ಥಿತಿ ಅವರ ಸಾಧನೆಗೆ ಕಾರಣವಾಗಿದೆ. ಇಂದು ನಗರದ ವಿವಿದೆಡೆ ಅವರ ಪುಣ್ಯಸ್ಮರಣೋತ್ಸವದ ಅಂಗವಾಗಿ ಅನ್ನದಾಸೋಹ ನಡೆಯುತ್ತಿದೆ. ಇದು ಪುಣ್ಯಾಶ್ರಮದಲ್ಲಿ ಅನ್ನ, ಶಿಕ್ಷಣ ದಾಸೋಹ ನಿರಂತರವಾಗಿ ನಡೆಯುತ್ತಿದೆ ಎಂದು ಹೇಳಿದರು.

ಬಿ.ಶ್ರೀರಾಮುಲು ಅವರ ಆಪ್ತ ಸಹಾಯಕರಾದ ಎಸ್.ಎಚ್ ಶಿವನಗೌಡ್ರ ಅವರು ಮಾತನಾಡಿ, ಪೂಜ್ಯಶ್ರೀ ಪುಟ್ಟರಾಜ ಗವಾಯಿಗಳವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಸಮಾಜಕ್ಕೆ ಪೂಜ್ಯರ ಕೊಡುಗೆ ಸಾಕಷ್ಟಿದೆ. ಪೂಜ್ಯರ ಆರೋಗ್ಯದಲ್ಲಿ ಏರುಪೇರಾದಾಗ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಶ್ರೀರಾಮುಲು ಅವರು ವೈದ್ಯರ ತಂಡದೊಂದಿಗೆ ಸ್ವತಃ ಅವರು ಇಲ್ಲಿದ್ದುಕೊಂಡು ಗುರುಗಳ ಸೇವೆ ಮಾಡಿದ್ದರಲ್ಲದೆ ನನಗೂ ಸಹ ಮಾರ್ಗದರ್ಶನ ನೀಡಿದ್ದರು ಎಂದು ಸ್ಮರಿಸಿಕೊಂಡರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಹಾಗೂ ಕರ್ನಾಟಕ ರಾಜ್ಯ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಬಸವರಾಜ ಬಳ್ಳಾರಿ ಅವರು ಮಾತನಾಡಿ, ಪುಟ್ಟರಾಜ ಗವಾಯಿಗಳು ಅಂಧ–ಅನಾಥ ಮಕ್ಕಳಿಗೆ ಶಕ್ತಿ ತುಂಬುವದರ ಜೊತೆಗೆ ಗದುಗಿನ ಕೀರ್ತಿಯನ್ನು ದೇಶದ ಉದ್ದಗಲಕ್ಕೂ ಹೆಚ್ಚಿಸಿದ್ದಾರೆ. ಅಧುನಿಕ ಜಗತ್ತಿನಲ್ಲಿ ಸರಕಾರದ ಸಾಕಷ್ಟು ಯೋಜನೆಗಳನ್ನು ಪಡೆದು ಸಾಧನೆ ಮಾಡಬಹುದು ಆದರೆ, ಹಿಂದಿನಿಂದಲೂ ವಿರೇಶ್ವರ ಪುಣ್ಯಾಶ್ರಮದಲ್ಲಿ ಉಚಿತ ವಸತಿ, ಶಿಕ್ಷಣ ಮತ್ತು ಅನ್ನ ದಾಸೋಹ ಮಾಡುವ ಮೂಲಕ ಅಂಧ–ಅನಾಥ ವಿದ್ಯಾರ್ಥಿಗಳಿಗೆ ಸ್ವಾವಲಂಬಿ ಜೀವನ ಕಲ್ಪಿಸಿರುವುದು ಸಾಮಾನ್ಯ ವಿಷಯವಲ್ಲ ಎಂದು ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷರಾದ ಶರಣಬಸಪ್ಪ ಗುಡಿಮನಿ ಅವರು ಮಾತನಾಡಿ, ಪುಟ್ಟರಾಜ ಗವಾಯಿಗಳವರ ದೇಹ ಅಸ್ತಂಗತವಾಗಿರಬಹುದು ಆದರೆ, ಅವರ ನಡೆದಾಡುವ ದೇವರಾಗಿ ನಮ್ಮೊಂದಿಗೆ ಸದಾ ಇದ್ದಾರೆ. ಅವರ ಕೃಪೆಯಿಂದ ಪುಣ್ಯಾಶ್ರಮದಲ್ಲಿ ಕಲಿತ ವಿದ್ಯಾರ್ಥಿಗಳು ನಿಜವಾಗಿ ಪುಣ್ಯ ಮಾಡಿದ್ದಾರೆ. ಅಲ್ಲದೆ, ಎಲೆಮರಿಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು. ಗಾನಯೋಗಿ ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಅಧ್ಯಕ್ಷರಾದ ಶಿವಲಿಂಗಯ್ಯಸ್ವಾಮಿ ಹಿರೇಮಠ ಸಿದ್ದಾಪುರ ಅವರು ಅಧ್ಯಕ್ಷತೆವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಪೂಜ್ಯಶ್ರೀ ಪಂ. ಪುಟ್ಟರಾಜ ಗವಾಯಿಗಳವರೇ ಈ ಸೇವಾ ಸಮಿತಿಯನ್ನು ಹುಟ್ಟು ಹಾಕಿ ಈ ಸೇವಾ ಸಮಿತಿಯಿಂದ ನಿರಂತರವಾಗಿ ಕಾರ್ಯಕ್ರಮಗಳು ನಡೆದು ಬರಲಿ ಎಂದು ಹಾರೈಸಿದ್ದಾರೆ. ಎಲ್ಲರ ಸಹಕಾರದಿಂದ ಗುರುಗಳ ಹೆಸರಿನಲ್ಲಿ ಆಶ್ರಮದಲ್ಲಿ ಬೆಳೆದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಕೀರ್ತಿ ತಂದ ಸಾಧಕರನ್ನು ಗುರುತಿಸಿ ದಾನಿಗಳು ನೀಡಿದ ನಗದು ಸಹಿತ ಪ್ರಶಸ್ತಿ ನೀಡುತ್ತಾ ಬರಲಾಗುತ್ತಿದೆ ಎಂದು ಹೇಳಿದರು.

ಸಮಾಜಸೇವಕರಾದ ರವಿಕಾಂತ ಅಂಗಡಿ, ಗಣ್ಯ ವ್ಯಾಪಾರಸ್ಥರಾದ ಸದಾಶಿವಯ್ಯಸ್ವಾಮಿ ಮದರಿಮಠ, ಗಣ್ಯ ವ್ಯಾಪಾರಸ್ಥರಾದ ವಸಂತ ಪಡಗದ, ಪಂಚಾಕ್ಷರಿ ಹಿಡ್ಕಿಮಠ, ದತ್ತಾ ಡೆವಲಪರ್ಸ್ ನಿರ್ದೇಶಕರಾದ ಕಿರಣ ಭೂಮಾ, ಚನ್ನಯ್ಯಸ್ವಾಮಿ ಹಿರೇಮಠ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಲಿಂ. ರಾಜಶೇಖರಯ್ಯನವರು ಹಾಗೂ ಲಿಂ. ನೀಲಾಂಬಿಕಾ ನವಲಿಹಿರೇಮಠ ಕೊಪ್ಪಳ ಇವರ ಸ್ಮರಣಾರ್ಥ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮುಧೋಳದ ಪಂ. ದೇವೇಂದ್ರಕುಮಾರ ಪತ್ತಾರ, ಬಿ. ಶ್ರೀರಾಮುಲು ಅವರ ಮಾತೋಶ್ರೀ ದಿ. ಶ್ರೀಮತಿ ಹೊನ್ನೂರಮ್ಮ ಇವರ ಸ್ಮರಣಾರ್ಥ ವಾದ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗದುಗಿನ ಪಂ. ಶರಣಕುಮಾರ ಗುತ್ತರಗಿ ಹಾಗೂ ಜ್ಯೋತಿಷ್ಯವಾಗ್ಮಿ ಪಂ.ಲಿಂ.ಚನ್ನವೀರಶಾಸ್ತ್ರೀಹಿಡ್ಕಿಮಠಅವರ ಸ್ಮರಣಾರ್ಥ ರಂಗಭೂಮಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಬಡ್ನಿಯ ರಾಚಯ್ಯ ಹಿರೇಮಠ ಅವರಿಗೆ ಶಿವಯೋಗಿ ಶ್ರೀ ಪುಟ್ಟರಾಜ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಸನ್ಮಾನಿತರ ಪರವಾಗಿ ಪಂ. ದೇವೇಂದ್ರಕುಮಾರ ಪತ್ತಾರ ಅವರು ಮಾತನಾಡಿ, ಪೂಜ್ಯರನ್ನು ಗುರುಗಳಾಗಿ ಪಡೆದಿರುವ ನಾವೇ ಪುಣ್ಯವಂತರು. ಪೂಜ್ಯರ ದರ್ಶನಾಶೀರ್ವಾದ ಇಲ್ಲದೆ ಇದ್ದರೆ ನಾವು ಈ ಮಟ್ಟಕ್ಕೆ ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಪಂ. ಪುಟ್ಟರಾಜ ಗವಾಯಿಗಳವರ ಹೆಸರಿನಲ್ಲಿ ಪ್ರಶಸ್ತಿ ಪಡೆಯುತ್ತಿರುವುದು ನನ್ನ ಪೂರ್ವ ಜನ್ಮದ ಪುಣ್ಯ ಎಂದು ಹೇಳಿದರು.

ಹರ್ಲಾಪುರದ ಸದಾನಂದ ಶಾಸ್ತ್ರಿಗಳು ಹರ್ತಿಹಿರೇಮಠ ಸಭಾ ನಿರೂಪಣೆ ಮಾಡಿದರು. ನಂತರ ಶ್ರೀ ವೀರೇಶ್ವರ ಪುಣ್ಯಾಶ್ರಮದ ಶಿಷ್ಯ ಪ್ರಶಿಷ್ಯವರಿಂದ ಅಹೋರಾತ್ರಿ ಸ್ವರ–ನಮನ ಕಾರ್ಯಕ್ರಮ ಜರುಗಿತು.

ಇದಕ್ಕೂ ಮುನ್ನ ಬೆಳಿಗ್ಗೆ 8 ಗಂಟೆಗೆ ಶಿವಯೋಗಿ ಡಾ. ಪಂ. ಪುಟ್ಟರಾಜ ಗುರುವರ್ಯರರ ಭಾವಚಿತ್ರದ ಮೆರವಣಿಗೆ ಶ್ರೀ ವೀರೇಶ್ವರ ಪುಣ್ಯಾಶ್ರಮದಿಂದ ಕುಂಭ ಹಾಗೂ ಕಳಸ ಕನ್ನಡಿಯೊಂದಿಗೆ ವಿವಿಧ ಕಲಾತಂಡಗಳೊಂದಿಗೆ ಜರುಗಿತು.

## ಸ್ಮಾರ್ಟ್ ಕಲಿಕೆಯತ್ತ ಸವಳ ಕ್ಯಾಂಪ್ ಶಾಲೆಯ ಹೊಸ ಹೆಜ್ಜೆ

**ಸತ್ಯಮಿಥ್ಯ ಸುದ್ದಿಮೂಲ ಹೊಸಕೇರಾ :**
ಇಂದಿನ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಮಕ್ಕಳ ಕಲಿಕೆಯು ಅದೇ ಮಟ್ಟನಲ್ಲಿ ಆಗಬೇಕಾದ ಅವಶ್ಯಕತೆ ಇದೆ. ಮಕ್ಕಳ ಕಲಿಕೆಯಲ್ಲಿ ಅವಶ್ಯಕ ಬದಲಾವಣೆಗಳು ಹಾಗೂ ಅತ್ಯುತ್ತಮ ಸಾಧನಗಳು ಸಹಕಾರಿಯಾಗಬಲ್ಲದು. ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸಲು ಅವರ ಕಲಿಕೆಯಲ್ಲಿ ಹೊಸತನವನ್ನು ಮೂಡಿಸಲು ಸ್ಮಾರ್ಟ್ ವಿಧಾನದ ಮೂಲಕ ಕಲಿಕೆ ಮಾಡಿಸುವುದು ಇಂದಿನ ಅವಶ್ಯಕತೆಯಿದೆ. ಯೂಟ್ಯೂಬ್, ಕಂಪ್ಯೂಟರ್ ಕಲಿಕೆ, ಗೂಗಲ್ ಬಳಕೆ ಮಕ್ಕಳ ಕಲಿಕೆಯನ್ನು ಹೆಚ್ಚುಗೊಳಿಸುತ್ತವೆ. ಅಂತೆಯೇ ಸ್ಮಾರ್ಟ್ ಟಿವಿಯ ಬಳಕೆಯೊಂದಿಗೆ ಅಥವಾ ಸ್ಮಾರ್ಟ್ ಸಾಧನಗಳ ಬಳಕೆಯೊಂದಿಗೆ ಕಲಿಕೆ ಮಕ್ಕಳಿಗೆ ನೈಜ ಅನುಭವವನ್ನು ಕೊಡುವುದರೊಂದಿಗೆ ಶಿಕ್ಷಕರ ಹೊರೆಯನ್ನು ಕಡಿಮೆಗೊಳಿಸುತ್ತದೆ. ಶಿಕ್ಷಕರ ಕೊರತೆ ಇರುವಲ್ಲಿ ಸ್ಮಾರ್ಟ್ ಕ್ಲಾಸ್, ಸ್ಮಾರ್ಟ್ ಸಾಧನಗಳು ಆ ಕೊರತೆಯನ್ನು ನೀಗಿಸುತ್ತದೆ. ಈ ಹಿನ್ನೆಲೆಯಲ್ಲಿ ತಾಲೂಕಿನ ಸವಳ ಕ್ಯಾಂಪ್ ಶಾಲೆಯು ಮಕ್ಕಳಿಗೆ ಸ್ಮಾರ್ಟ್ ಶಿಕ್ಷಣವನ್ನು ನೀಡುವತ್ತ ಹೊಸ ಹೆಜ್ಜೆ ಹಾಕಿದೆ. ಕಿರಿಯ ಪ್ರಾಥಮಿಕ ವಿಭಾಗ ಹೊಂದಿರುವ ಕೇವಲ 24 ಮಕ್ಕಳೊಂದಿಗೆ ಸುರೇಶ ಜಿ.ಎಸ್ ಹಾಗೂ ಒಬ್ಬ ಅತಿಥಿ ಶಿಕ್ಷಕರ ಜೊತೆಗೆ ಕಾರ್ಯನಿರ್ವಹಿಸುತ್ತಿರುವ ಶಾಲೆ ಮಕ್ಕಳ ಸ್ಮಾರ್ಟ್ ಕಲಿಕೆಗಾಗಿ ಬೆಂಗಳೂರಿನ ನಗು ಫೌಂಡೇಶನ್ ಸಹಕಾರ ಪಡೆದು ಶಾಲೆಗೆ ಮಿನಿ ಪ್ರೊಜೆಕ್ಟರ್ ಅನ್ನು ದೇಣಿಗೆ ಪಡೆದುಕೊಂಡಿದೆ. ಆ ಮೂಲಕ ಮಕ್ಕಳ ಸ್ಮಾರ್ಟ್ ಕಲಿಕೆಗೆ ಅನುವು ಮಾಡಲಾಗಿದೆ. ಈ ಕುರಿತು ಸಂತಸ ವ್ಯಕ್ತಪಡಿಸಿದ ಮುಖ್ಯ ಗುರುಗಳಾದ ಸುರೇಶ ಜಿ ಎಸ್ ರವರು ನಗು ಫೌಂಡೇಶನ್ ಮುಖ್ಯಸ್ಥರಾದ ದೀಪ್ತಿ ಹಾಗೂ ಶಾಲೆಗೆ ಪ್ರೊಜೆಕ್ಟರ್ ಒದಗಿಸುವಲ್ಲಿ ಸಹಕರಿಸಿದ ಚೌಡ್ಲಾಪುರ ಸೂರಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ. ನಗು ಫೌಂಡೇಶನ್ ದೇಣಿಗೆಗಾಗಿ ಅತಿಥಿ ಶಿಕ್ಷಕಿ ಮಾಲಾಶ್ರೀ, ಎಸ್ ಡಿಎಂಸಿ ಅಧ್ಯಕ್ಷರಾದ ಬಸವರಾಜ , ಉಪಾಧ್ಯಕ್ಷರಾದ ನಾಗರತ್ನ , ಸದಸ್ಯರಾದ ಸಂಗಪ್ಪ, ಧರ್ಮರಾಜು, ಕನಕಪ್ಪ, ವೆಂಕಟೇಶ, ರಾಮಣ್ಣ, ಕನಕಪ್ಪ, ಲಕ್ಷ್ಮಣ, ಹನುಮಂತ, ಹುಲಿಗೆಮ್ಮ, ಶೇಖಮ್ಮ ಮುಂತಾದವರು ಸಂತಸ ವ್ಯಕ್ತಪಡಿಸಿದ್ದಾರೆ.



## ಬರ, ಬೆಳೆಹಾನಿಗೆ ಎಕರೆಗೆ 50 ಸಾವಿರ ರೂ. ಪರಿಹಾರ ನೀಡಬೇಕು: ಆರ್. ಅಶೋಕ್

**ಸತ್ಯಮಿಥ್ಯ ಸುದ್ದಿಮೂಲ ಗದಗ :**
'ಗದಗಸೇರಿದಂತೆಬರಪೀಡಿತತಾಲೂಕುಗಳ ಪಟ್ಟಿಯಿಂದ ಹೊರಗಿಡಲಾಗಿರುವ ಉಳಿದ ಎಲ್ಲಬರಪೀಡಿತತಾಲೂಕುಗಳನ್ನುತಕ್ಷಣವೇ ಬರ ಪೀಡಿತ ಎಂದು ಘೋಷಿಸಬೇಕು. ಜತೆಗೆ ಬೆಳೆ ಹಾನಿಯಿಂದ ಸಂಕಷ್ಟದಲ್ಲಿರುವ ಪ್ರತಿಯೊಬ್ಬ ರೈತನಿಗೂ ಎಕರೆಗೆ 50 ಸಾವಿರ ರೂ.ಪರಿಹಾರ ನೀಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.



ಎಕ್ಸ್ ನಲ್ಲಿ ಪೋಸ್ಟ್ ಹಾಕಿರುವ ಅವರು, 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ನಿಮ್ಮದೇ ಪಕ್ಷದ ಹಿರಿಯ ಶಾಸಕರು ರಾಜೀನಾಮೆ ಬೆದರಿಕೆ ಹಾಕುವ ಸ್ಥಿತಿ ತಂದಿಟ್ಟಿರುವ ನೀವು, ಕೇವಲ ಶೋಕಿ ರಾಜ–ಕಾರಣ ಮಾಡುವುದನ್ನು ಬಿಟ್ಟು ರೈತರ ಕಣ್ಣೀರು ಒರೆಸುವ ಕೆಲಸ ಮಾಡಿ. ರೈತರ ಹೊಟ್ಟೆಗೆ ಪದೇ ಪದೇ ಹೊಡೆಯುತ್ತಿರುವ ಈ ನಿರ್ದಯಿ ಕಾಂಗ್ರೆಸ್ ಸರಕಾರಕ್ಕೆ ಕರ್ನಾಟಕದ ಜನತೆ ತಕ್ಕ ಪಾಠ ಕಲಿಸುವುದು ನಿಶ್ಚಿತ' ಎಂದು ಎಚ್ಚರಿಸಿದ್ದಾರೆ.

'ಸ್ವಪಕ್ಷದ ಶಾಸಕರೇ ಸರಕಾರದ ರೈತ ವಿರೋಧಿ ಧೋರಣೆಗೆ ಛೀ... ಥೂ... ಅಂತ ಉಗಿಯುತ್ತಿದ್ದಾರೆ. ಅನ್ನದಾತರನ್ನು ಭಿಕ್ಷುಕರಂತೆ ಕಾಣುತ್ತಿರುವ ಈ ಲಜ್ಜೆಗೆಟ್ಟ ಸರಕಾರದ ರೈತ ವಿರೋಧಿ ಧೋರಣೆಗೆ ಸ್ವಪಕ್ಷದ ಹಿರಿಯ ಶಾಸಕರೇ ಕನ್ನಡಿ ಹಿಡಿದಿದ್ದಾರೆ. ಗದಗ ತಾಲೂಕಿನಲ್ಲಿ ಶೇ.49ರಷ್ಟು ಮಳೆ ಕೊರತೆಯಾಗಿದ್ದರೂ, ಬೆಳೆ ಹಾನಿಯಾಗಿ ರೈತರು ಕಣ್ಣೀರು ಹಾಕುತ್ತಿದ್ದರೂ, ಈ ತಾಲೂಕನ್ನು ಬರಪೀಡಿತ ಎಂದು ಘೋಷಿಸದೆ ಕಣ್ಣಿಗೆ ಮಣ್ಣೆರಚುತ್ತಿದೆ. ಸ್ವತಃ ಹಿರಿಯ ಶಾಸಕ ಎಚ್.ಕೆ.ಪಾಟೀಲ್, 'ಅ.10ರೊಳಗೆ ಗದಗ ತಾಲೂಕನ್ನು ಬರಪೀಡಿತ ಎಂದು ಘೋಷಿಸದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ತಮ್ಮದೇ ಸರಕಾರದ ವಿರುದ್ಧ ಸಿಡಿದೆದ್ದಿದ್ದಾರೆ ಎಂದರೆ ಈ ಲಜ್ಜೆಗೇಡಿ ಸರಕಾರ ಎಷ್ಟು ದಪ್ಪ ಚರ್ಮದ್ದು ಅಂತ ನೀವೇ ಊಹಿಸಿಕೊಳ್ಳಿ ಎಂದು ಲೇವಡಿ ಮಾಡಿದ್ದಾರೆ. ಹೆಲಿಕಾಪ್ಟರ್ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ, ಗದಗಕ್ಕೆ ಭೇಟಿ ನೀಡಿ ಬೆಳೆ ಹಾನಿ ಪರಿಶೀಲನೆ ನಡೆಸಿದ ಮೇಲೆಯೂ ಬರ ಘೋಷಣೆ ಮಾಡಲು ನಿಮಗೇನು ಅಡ್ಡಿ? ರೈತರಿಗೆ ಪರಿಹಾರ ಕೊಡಲು ನಿಮ್ಮ ಖಜಾನೆಯಲ್ಲಿ ಹಣವಿಲ್ಲವೇ ಅಥವಾ ಉತ್ತರ ಕರ್ನಾಟಕದ ರೈತರ ಎಂದರೆ ನಿಮಗಷ್ಟು ನಿರ್ಲಕ್ಷ್ಯವೇ?' ಎಂದು ಆರ್.ಅಶೋಕ್ ಪ್ರಶ್ನಿಸಿದ್ದಾರೆ.

## ವಿಘ್ನವಿನಾಶಕನ 9ನೇ ದಿನದ ವಿಸರ್ಜನೆ: ಸಡಗರ ಸಂಭ್ರಮ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಗದಗ–ಬೆಟಗೇರಿ ಅವಳಿ ನಗರದಲ್ಲಿ ಗಣೇಶ ಪ್ರತಿಷ್ಠಾಪನೆಯ 9ನೇ ದಿನದ ವಿಸರ್ಜನೆ ಸಡಗರ, ಸಂಭ್ರಮ ಹಾಗೂ ಶ್ರದ್ಧಾಭಕ್ತಿಯಿಂದ ನಡೆಯಿತು.

ಕಳೆದ ಒಂಬತ್ತು ದಿನಗಳಿಂದ ವಿವಿಧ ಗಣೇಶ ಮಂಡಳಿಗಳ ವತಿಯಿಂದ ವಿಘ್ನವಿನಾಶಕನಿಗೆ ನಿತ್ಯ ಪೂಜೆ, ವಿಶೇಷ ಆರಾಧನೆ ಹಾಗೂ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿಜೃಂಭಣೆಯಿಂದ ಗಣೇಶೋತ್ಸವ ಆಚರಿಸಲಾಯಿತು.

9ನೇ ದಿನದಂದು ಗಣೇಶ ಮೂರ್ತಿಗಳ ವಿಸರ್ಜನೆಗಾಗಿ ನಗರದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ವಿವಿಧ ಗಣೇಶ ಮಂಡಳಿಗಳ ಮೂರ್ತಿಗಳು ಅಲಂಕೃತ ವಾಹನಗಳಲ್ಲಿ ಸಾಗಿದವು. ಮೆರವಣಿಗೆಯಲ್ಲಿ ಯುವಕರು, ಮಕ್ಕಳು ಸೇರಿದಂತೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಮೆರವಣಿಗೆಯುದ್ದಕ್ಕೂ ಭಕ್ತರು ಗಣೇಶನ ನಾಮಸ್ಮರಣೆ ಮಾಡುತ್ತಾ, ಡೊಳ್ಳು, ತಾಳಮೇಳ ಹಾಗೂ ವಿವಿಧ ವಾದ್ಯಗಳ ನಾದಕ್ಕೆ ಹೆಜ್ಜೆ ಹಾಕಿದರು. ಕೆಲವೆಡೆ ಯುವಕರು ಸಾಂಸ್ಕೃತಿಕ ಪ್ರದರ್ಶನ ನೀಡುವ ಮೂಲಕ ಗಮನ ಸೆಳೆದರು.

ಗಣೇಶೋತ್ಸವದ ಹಿನ್ನೆಲೆಯಲ್ಲಿ ನಗರದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದ್ದು, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು. ವಿವಿಧೆಡೆ ಭಕ್ತರಿಗೆ ಪ್ರಸಾದ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು.




## ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಗೆ ಹರೀಶ್ ಆಯ್ಕೆ

**ಸತ್ಯಮಿಥ್ಯ ಸುದ್ದಿಮೂಲ ಬೆಳಧಡಿ:**
ಇಲ್ಲಿನ ಶ್ರೀ ವೆಂಕಟೇಶ್ವರ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿ ಹರೀಶ್ ಮುಳಗುಂದ ಅವರು ಗದಗ ಗ್ರಾಮೀಣ ವಲಯದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಕುಸ್ತಿ ಪಂದ್ಯಾವಳಿಯಲ್ಲಿ ಗಮನಾರ್ಹ ಸಾಧನೆ ಮಾಡುವ ಮೂಲಕ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.



ತಾಲೂಕು ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಹರೀಶ್ ಮುಳಗುಂದ ಅವರ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಕರ್ನಾಟಕ ಚೆನ್ನದಾಸರ ಸಮಾಜ ಸೇವಾ ಸಂಘದ ಅಧ್ಯಕ್ಷ ಪ್ರೊ. ಕೆ.ಎಚ್. ಬೇಲೂರ, ಕಾರ್ಯದರ್ಶಿ ವಿ.ಬಿ. ಶೇಷಗಿರಿ, ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಎಚ್.ಟಿ. ಸಂಜೀವ ಸ್ವಾಮಿ, ಕಾರ್ಯದರ್ಶಿ ಡಿ.ಎಚ್. ಶೇಷಗಿರಿ, ಮುಖ್ಯೋಪಾಧ್ಯಾಯ ಶ್ರೀಕಾಂತ ಸಂಜೀವಸ್ವಾಮಿ, ದೈಹಿಕ ಶಿಕ್ಷಕ ಮಾರುತಿ ಹಂಡಿ, ಶಿಕ್ಷಕ ಶಂಕರ ನಾಯಕ ಸೇರಿದಂತೆ ಶಾಲೆಯ ಸಮಸ್ತ ಶಿಕ್ಷಕ ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಯನ್ನು ಅಭಿನಂದಿಸಿದ್ದಾರೆ.

ರಾಜ್ಯಮಟ್ಟದ ಕ್ರೀಡಾಕೂಟದಲ್ಲಿಯೂ ಹರೀಶ್ ಮುಳಗುಂದ ಉತ್ತಮ ಪ್ರದರ್ಶನ ನೀಡಿ ಶಾಲೆ ಹಾಗೂ ಗದಗ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಲಿ ಎಂದು ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕ–ಸಿಬ್ಬಂದಿ ಶುಭ ಹಾರೈಸಿದ್ದಾರೆ.

## ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಲು ಮಕ್ತುಂಸಾಬ್ ಮುಧೋಳ ಒತ್ತಾಯ

ರೋಣ: ಮಳೆ ಕೊರತೆಯಿಂದ ನಲುಗುತ್ತಿರುವ ರೋಣ, ಮುಂಡರಗಿ ಹಾಗೂ ಗದಗ ತಾಲೂಕುಗಳನ್ನು ಶೀಘ್ರ ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಬೇಕು. ಇಲ್ಲದಿದ್ದರೆ ಜೆಡಿಎಸ್ ಪಕ್ಷದಿಂದ ಜಿಲ್ಲಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮಕ್ತುಂಸಾಬ್ ಮುಧೋಳ ಎಚ್ಚರಿಕೆ ನೀಡಿದರು.



ಪಟ್ಟಣದ ಲೋಕೋಪಯೋಗಿ ಇಲಾಖೆ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಇಡೀ ಜಿಲ್ಲೆಯಲ್ಲಿ ಎಲ್ಲೂ ವಾಡಿಕೆಯಷ್ಟು ಮಳೆ ಸುರಿದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರಾದ ಬಸವರಾಜ ರಾಯರಡ್ಡಿಯವರು ಅಧಿಕಾರಿಗಳ ಜತೆಗೆ ಪ್ರತಿ ತಾಲೂಕಿನ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆದರೂ ಮೂರು ತಾಲೂಕುಗಳನ್ನು ಬಟ ಪಟ್ಟಿಯಿಂದ ಬಿಟ್ಟಿದ್ದು ಸರಿಯಲ್ಲ ಎಂದರು.

ಕೃಷಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಸರ್ಕಾರಕ್ಕೆ ಸಮರ್ಪಕ ಬೆಳೆ ಹಾನಿ ವರದಿ ಸಲ್ಲಿಸದಿರುವುದು ಮೂರೂ ತಾಲೂಕುಗಳು ಬರ ಪಟ್ಟಿಯಿಂದ ಹೊರಗುಳಿಯಲು ಪ್ರಮುಖ ಕಾರಣವಾಗಿದೆ ಎಂದು ಆರೋಪಿಸಿದರು.

ಸಂಗಪ್ಪ ಯಲಬುಣಚಿ, ಬಾದ್‌ಷಹಾ ಭಾಗವಾನ ಇತರರು ಇದ್ದರು.

## 41ನೇ ವಾರ್ಷಿಕ ಉರುಸ್‌ಗೆ ಸಿದ್ಧತೆ; ಪೋಸ್ಟರ್ ಬಿಡುಗಡೆ

**ಗಂಗಾವತಿ:** ನಗರದ ಬೇರೊನಿ ಆಬಾದಿ ಮಸೀದಿ ಆವರಣದಲ್ಲಿರುವ ಕರ್ನೂಲ್ ಸಾಹೇಬ್ ದರ್ಗಾ ಶರೀಫ್‌ನಲ್ಲಿ ಕರ್ನೂಲ್ ಸಾಹೇಬ್ ಅವರ 41ನೇ ವಾರ್ಷಿಕ ಉರುಸ್–ಎ–ಶರೀಫ್ ಕಾರ್ಯಕ್ರಮವು ಅಕ್ಟೋಬರ್ 2ರಿಂದ 4ರವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ಈ ಹಿನ್ನೆಲೆಯಲ್ಲಿ ಸೋಮವಾರ ಬೇರೊನಿ ಆಬಾದಿ ಮಸೀದಿ ಅಧ್ಯಕ್ಷ ಶಾಮಿದ್ ಮನಿಯರ್, ದರ್ಗಾ ಅಧ್ಯಕ್ಷ ತುಂಗಭದ್ರಾ ಹುಸೇನ್ ಸಾಬ್, ಕಾರ್ಯದರ್ಶಿ ಅನ್ವರ್ ಮನಿಯರ್ ಹಾಗೂ ದರ್ಗಾದ ಸರ್ವ ಸದಸ್ಯರು 41ನೇ ವಾರ್ಷಿಕ ಉರುಸ್–ಎ–ಶರೀಫ್ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ದರ್ಗಾ ಅಧ್ಯಕ್ಷ ತುಂಗಭದ್ರಾ ಹುಸೇನ್ ಸಾಬ್ ಹಾಗೂ ಕಾರ್ಯದರ್ಶಿ ಅನ್ವರ್ ಮನಿಯರ್, ಅಕ್ಟೋಬರ್ 2ರಿಂದ 4ರವರೆಗೆ ಮೂರು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಉರುಸ್–ಎ–ಶರೀಫ್ ಕಾರ್ಯಕ್ರಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಉರುಸ್ ಅಂಗವಾಗಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ಶ್ರದ್ಧಾಭಕ್ತಿಯಿಂದ ಪಾಲ್ಗೊಂಡು ದರ್ಗಾ ಶರೀಫ್‌ನ ಆಶೀರ್ವಾದ ಪಡೆಯಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ರಾಜಾವಲಿ ಪೈಲ್ವಾನ್, ಹಟೇಲಿ ಭಾಷಾ, ಕೆ. ಸಾಧಿಕ್, ಸಾಹಿಲ್, ಆಯೂಬ್ ಖಾನ್, ದಾವೂದ್ ಭಾಷಾ, ಮೆಹಬೂಬ್ ಸೇರಿದಂತೆ ದರ್ಗಾ ಸಮಿತಿಯ ಸದಸ್ಯರು ಹಾಗೂ ಇತರರು ಉಪಸ್ಥಿತರಿದ್ದರು.

ಸತ್ಯಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
SATY MITHI
Kannada Daily Morning

# ಗಜಾನನ ಮಹಾಮಂಡಳಿಯಿಂದ ವಿವಿಧ ವಿಭಾಗಗಳಲ್ಲಿ ವಿಜೇತ ಮಂಡಳಿಗಳ ಆಯ್ಕೆ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಗಜಾನನ ಮಹಾಮಂಡಳಿಯ ವತಿಯಿಂದ ಗದಗ–ಬೆಟಗೇರಿ ಅವಳಿ ನಗರದ ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳ ದೃಶ್ಯಾವಳಿ, ಸುಂದರ ಗಣಪತಿ, ಅಲಂಕಾರ ಹಾಗೂ ಸಾಂಸ್ಕೃತಿಕ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮಂಡಳಿಗಳನ್ನು ಆಯ್ಕೆ ಮಾಡಲಾಯಿತು.

ಗಜಾನನ ಮಹಾಮಂಡಳಿ ಅಧ್ಯಕ್ಷ ರಾಜಣ್ಣ ಮಲ್ಲಾಡದ ಅವರ ನೇತೃತ್ವದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ವಿವಿಧ ಮಂಡಳಿಗಳ ಪ್ರದರ್ಶನ ಹಾಗೂ ಅಲಂಕಾರಗಳನ್ನು ಪರಿಶೀಲಿಸಿ ವಿಜೇತರನ್ನು ಆಯ್ಕೆ ಮಾಡಲಾಯಿತು.

ದೃಶ್ಯಾವಳಿ ವಿಭಾಗ: ಪ್ರಥಮ ಸ್ಥಾನವನ್ನು ಸಾರ್ವಜನಿಕ ಶ್ರೀ ಗಜಾನನೋತ್ಸವ ಸಮಿತಿ, ನೇಕಾರ ನಗರ, ದ್ವಿತೀಯ ಸ್ಥಾನವನ್ನು ಬಾಲಾ ಗಜಾನನ ಉತ್ಸವ ಮಂಡಳಿ, ನೇಕಾರ ನಗರ ಹಾಗೂ ತೃತೀಯ ಸ್ಥಾನವನ್ನು ಸೂರ್ಯೋದಯ ಗಜಾನನ ಮಂಡಳಿ, ನೇಕಾರ ನಗರ ಪಡೆದುಕೊಂಡಿವೆ. ಸುಂದರ ಗಣಪತಿ ವಿಭಾಗ: ಪ್ರಥಮ ಸ್ಥಾನವನ್ನು ನವಚೇತನ ಯುವಕ ಸಂಘ, ಜವಳಗಲ್ಲಿ, ದ್ವಿತೀಯ ಸ್ಥಾನವನ್ನು ಗಜಾನನೋತ್ಸವ ಟ್ರಸ್ಟ್, ಎಪಿಎಂಸಿ ಹಾಗೂ ತೃತೀಯ ಸ್ಥಾನವನ್ನು ವರಸಿದ್ಧಿ ವಿನಾಯಕ ಮಿತ್ರ ಮಂಡಳಿ ಪಡೆದುಕೊಂಡಿವೆ.

ಅಲಂಕಾರ ಹಾಗೂ ಸಾಂಸ್ಕೃತಿಕ ವಿಭಾಗ: ಪ್ರಥಮ ಸ್ಥಾನವನ್ನು



ಚಂದ್ರೋದಯ ಸಾರ್ವಜನಿಕ ಶ್ರೀ ಗಜಾನನೋತ್ಸವ ಸಮಿತಿ, ನೇಕಾರ ನಗರ, ದ್ವಿತೀಯ ಸ್ಥಾನವನ್ನು ಗಜಾನನ ಉತ್ಸವ ಸಮಿತಿ, ಒಕ್ಕಲಗೇರಿ ಹಾಗೂ ತೃತೀಯ ಸ್ಥಾನವನ್ನು ಜಾಗೃತಾ ಗಜಾನನ ಯುವಕ ಮಂಡಳಿ, ಹುಡ್ಕೊ, ಗದಗ ಪಡೆದುಕೊಂಡಿವೆ.

ವಿಜೇತರ ಆಯ್ಕೆ ಸಂದರ್ಭದಲ್ಲಿ ತರುಣ ವ್ಯಾಪಾರಸ್ಥರ ಗಜಾನನ ಸಮಿತಿಯ ಅಧ್ಯಕ್ಷರಾದ ಅಜ್ಜಣ್ಣ ಮಲ್ಲಾಡದ, ಡಿವೈಎಸ್ಪಿ ಮುತುರ್ಜಾ ಖಾದ್ರಿ, ಸಿದ್ದರಾಮೇಶ್ವರ ಗಡಾದ, ಶಹರ ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ, ಕಿಶನ್ ಮೆಹರವಾಡೆ, ಅನಿಲ್ ಅಬ್ಬಿಗೇರಿ ರಾಜು ಖಾನಪ್ಪನವರ್ ಮಹಾಂತೇಶ ಪಾಟೀಲ, ವಿಜಯ ಶಿವಪ್ಪಗೌಡ್ರು, ರಾಜು ಮುಧೋಳ, ವಿಜಯ ಅಬ್ಬಿಗೇರಿ ಮಂಜಣ್ಣ ಅಬ್ಬಿಗೇರಿ, ಮಂಜಣ್ಣ ಬೆಲೇರಿ, ಅಜ್ಜಣ್ಣ ಮಲ್ಲಾಡದ, ರಮೇಶ ಶಿಗ್ಲಿ, ಶಂಕರ ಮುಳುಗುಂದ, ವಾಸು ಜೋಗಿನ, ತಿಮ್ಮಣ್ಣ ಕೋನರೆಡ್ಡಿ, ಅನಿಲ ಮುಳ್ಳಾಳ, ಕಿರಣ ಹಿರೇಮಠ, ಸಚಿನ್ ಮಲ್ಲಾಡದ, ಆದಿತ್ಯ ಮಲ್ಲಾಡದ, ನಂದೀಶ ಮಲ್ಲಾಡದ, ಪ್ರಮೋದ ವಾರಕರ, ಮಾಂತೇಶ ಖಾತರಿಕಿ ತರುಣ ವ್ಯಾಪಾರಸ್ಥರ ಗಜಾನನ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಗಜಾನನ ಮಹಾಮಂಡಳಿಯ ಪದಾಧಿಕಾರಿಗಳು ಮತ್ತು ಸದಸ್ಯರು, ಗದಗ–ಬೆಟಗೇರಿ ಅವಳಿ ನಗರದ ವಿವಿಧ ಸಾರ್ವಜನಿಕ ಗಜಾನನ ಮಂಡಳಿಗಳ ಪದಾಧಿಕಾರಿಗಳು, ಗಣ್ಯರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕೆಪಿಎಸ್‌ಸಿ ಬಂದ್ ಮಾಡಲು ಚಿಂತನೆ

## ಸಂಚಲನ ಮೂಡಿಸಿದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿಕೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದಲ್ಲಿನಡೆಯುತ್ತಿರುವಅಕ್ರಮಗಳಿಂದಬೇಸತ್ತಿರುವ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ಕೆಪಿಎಸ್‌ಸಿಯನ್ನೇ ಸಂಪೂರ್ಣವಾಗಿ ಬಂದ್ ಮಾಡಲು ಚಿಂತಿಸುತ್ತಿರುವುದಾಗಿ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಸಿಎಂ ಡಿಕೆ ಶಿವಕುಮಾರ್, "ಸಾಧ್ಯವಾದರೆ ಕೆಪಿಎಸ್‌ಸಿಯನ್ನು ಮುಚ್ಚಬಹುದೇ ಎಂಬುದರ ಕುರಿತು ನಾನು ಪರಿಶೀಲಿಸುತ್ತಿದ್ದೇನೆ" ಎಂದು ಹೇಳಿದ್ದಾರೆ. ಕೆಪಿಎಸ್‌ಸಿ ಹಗರಣದ ಆರೋಪದ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ, ಕರ್ನಾಟಕ ಹೈಕೋರ್ಟ್ ನಿನ್ನೆ (ಸೆ.21–ಸೋಮವಾರ) ನಿರ್ದೇಶನ ನೀಡಿದೆ. ಇದರ ಬೆನ್ನಲ್ಲೇ, ಸಿಎಂ ಡಿಕೆ ಶಿವಕುಮಾರ್ ಅವರು ಕೆಪಿಎಸ್‌ಸಿಯನ್ನೇ ಬಂದ್ ಮಾಡುವ ಬಗ್ಗೆ ಚಿಂತನೆ ನಡೆಸುತ್ತಿರುವುದಾಗಿ ಹೇಳಿ ಸಂಚಲನ ಸೃಷ್ಟಿಸಿದ್ದಾರೆ.

**ಸಿಎಂ ಹೇಳಿದ್ದೇನು?:** ಕೆಪಿಎಸ್‌ಸಿ ನೇಮಕಾತಿಯಲ್ಲಿ ದೊಡ್ಡ ಮಟ್ಟದ ಹಗರಣ ನಡೆದಿದೆ. ನಮಗೆ ವಿದ್ಯಾರ್ಥಿಗಳ ಭವಿಷ್ಯವೇ ಮುಖ್ಯವಾಗಿದ್ದು, ಇಂತಹ ಹಗರಣಗಳನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಹೀಗಾಗಿ ಕೆಪಿಎಸ್‌ಸಿಯನ್ನು ಯಾವ ರೀತಿ ಬಂದ್ ಮಾಡಬೇಕು ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿದ್ದೇನೆ" ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳ ಮುಂದೆ ಹೇಳಿದರು.

ಸಿಎಂ ಡಿಕೆ ಶಿವಕುಮಾರ್ ಅವರ ಕೆಪಿಎಸ್‌ಸಿ ಸಂಸ್ಥೆಯನ್ನೇ ಬಂದ್ ಮಾಡುವ ಬಗ್ಗೆ ಮಾತನಾಡಿದ್ದು, ಇದು ರಾಜ್ಯದಲ್ಲಿ ಭಾರೀ ಸಂಚಲನವನ್ನೇ ಸೃಷ್ಟಿಸಿದೆ. ಕೆಪಿಎಸ್‌ಸಿ ಬಂದ್ ಮಾಡುವುದಾದರೆ ಸರ್ಕಾರ ಲೋಕಸೇವಾ ಪರೀಕ್ಷೆಗಳನ್ನು ಹೇಗೆ ನಡೆಸಲಿದೆ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸಿದೆ. ಇದಕ್ಕೂ ಸರ್ಕಾರದ ಬಳಿ ಉತ್ತರವಿದ್ದಂತೆ ತೋರುತ್ತಿದೆ.



ಪರೀಕ್ಷಾ ಪ್ರಾಧಿಕಾರದ ಮೂಲಕ ನೇಮಕಾತಿಗಳನ್ನು ನಡೆಸುವ ಬಗ್ಗೆ, ರಾಜ್ಯ ಸರ್ಕಾರ ಗಂಭೀರ ಚರ್ಚೆಯಲ್ಲಿ ತೊಡಗಿರುವ ಲಕ್ಷಣಗಳು ಕಂಡುಬರುತ್ತಿವೆ. ಕೆಪಿಎಸ್‌ಸಿ ಬಂದ್ ಮಾಡಿ ಇಲಾಖೆಗಳ ಮೂಲಕವೇ ನೇಮಕಾತಿ ನಡೆಸುವುದು, ಮುಖ್ಯಮಂತ್ರಿ ಡಿಕೆ ಶಿವಕುಮಾರ್ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದ ಉದ್ದೇಶವಾಗಿರಬಹುದು.

ಕೆಪಿಎಸ್‌ಸಿಯನ್ನು ಬಂದ್ ಮಾಡುವ ಬಗ್ಗೆ, ಸಿಎಂ ಡಿಕೆ ಶಿವಕುಮಾರ್ ನೀಡಿರುವ ಹೇಳಿಕೆಗಳು, ಅವರು ನಿರಂತರ ಹಗರಣಗಳಿಂದ ಬೇಸತ್ತಿದ್ದಾರೆ ಎಂಬುದಕ್ಕೆ ಜ್ವಲಂತ ಸಾಕ್ಷಿಯಾಗಿದೆ. "ಎಷ್ಟೇ ಕಠಿಣ ನಿಯಮಗಳನ್ನು ಜಾರಿಗೂ ತಂದರೂ, ಕೆಪಿಎಸ್‌ಸಿಯಲ್ಲಿ ಹಗರಣಗಳು ನಡೆಯುತ್ತಲೇ ಇವೆ. ಹೀಗಾಗಿ ಕಾನೂನು ಮೂಲಕವೇ ಸಂಸ್ಥೆಯನ್ನು ಮುಚ್ಚುವ ಬಗ್ಗೆ ಚರ್ಚೆ ನಡೆದಿದೆ" ಎಂಬ ಡಿಕೆಶಿ ಹೇಳಿಕೆ ಗಮನ ಸೆಳೆದಿದೆ.

ಇಷ್ಟೇ ಅಲ್ಲದೇ ಕೆಪಿಎಸ್‌ಸಿ ಹಗರಣದ ಆರೋಪದ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಹೈಕೋರ್ಟ್ ಆದೇಶ ನೀಡಿರುವುದಕ್ಕೂ, ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ. ಎಸ್‌ಐಟಿ ತಂಡದಲ್ಲಿ ಯಾರಿರಬೇಕು ಎಂಬುದನ್ನು ರಾಜ್ಯ ಸರ್ಕಾರವೇ ನಿರ್ಧರಿಸಲಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# ಅಸ್ತ್ರವಾದ ಶಿವಲಿಂಗೇಗೌಡರ ಲಂಚದ ಮಾತು

**ಬೆಂಗಳೂರು:** "ಕೆಲಸ ಮಾಡಿಕೊಟ್ಟ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡುವುದು ನಿಮ್ಮ ಧರ್ಮ" ಎಂದು ಅಬಕಾರಿ ಸಚಿವ ಶಿವಲಿಂಗೇಗೌಡ ನೀಡಿರುವ ಹೇಳಿಕೆ ಇದೀಗ ಬಿಜೆಪಿಗೆ ಸಿಕ್ಕ ಅಸ್ತ್ರವಾಗಿದೆ. ಸಚಿವರು ಪರೋಕ್ಷವಾಗಿ ಲಂಚ ನೀಡಿ ಎಂದು ಪ್ರಚೋದನೆ ನೀಡಿದ್ದಾರೆ ಎಂದು ಬಿಜೆಪಿ ನಾಯಕರು ಆರೋಪ ಮಾಡಿದ್ದಾರೆ. ಅಲ್ಲದೆ, ಸರ್ಕಾರ ಈ ಬಗ್ಗೆ ತನ್ನ ನಿಲುವೇನು ಎಂಬುವುದನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.



ಶನಿವಾರಹಾಸನದಲ್ಲಿನಡೆದಿದ್ದಪ್ರಜಾಸೇವಾಆಂದೋಲನದಸಂದರ್ಭದಲ್ಲಿ ಅಬಕಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ನೀಡಿರುವ ಹೇಳಿಕೆ ಲಂಚ ನೀಡಲು ಪ್ರಚೋದಿಸುವಂತಹ ಹೇಳಿಕೆ ನೀಡಿದ್ದಾರೆ ಎಂಬುವುದು ಆರೋಪವಾಗಿದೆ. ಈಗಾಗಲೇ ಈ ಸಂಬಂಧಿಸಿದಂತೆ ವಕೀಲರ ತಂಡವು ಹಾಸನ ಲೋಕಾಯುಕ್ತ ಕಚೇರಿಗೆ ಸೋಮವಾರ ದೂರು ಸಲ್ಲಿಸಿದೆ. ಇದೀಗ ರಾಜಕೀಯವಾಗಿಯೂ ಈ ವಿಚಾರ ಸದ್ದು ಗದ್ದಲಕ್ಕೆ ಕಾರಣವಾಗಿದೆ.

**ಯಾರು ಏನಂದರು?:** ಬಿಜೆಪಿ ಶಾಸಕ ಸಿ ಟಿ ರವಿ ಮಾತನಾಡಿ, "ಸಚಿವರಾದ ಶಿವಲಿಂಗೇಗೌಡ ಮಾತಿನ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು.ಮಾಡಿದ ಕೆಲಸಕ್ಕೆ ಧರ್ಮ ಅಂತ ಹೇಳಿದ್ದಾರೆ. ಸರ್ಕಾರದ ಸಹಮತ ಇದ್ರೆ ಯಾವ ಇಲಾಖೆಯಲ್ಲಿ ಎಷ್ಟು ರೇಟ್ ಕಾರ್ಡ್ ಇದೆ ಎಂಬುವುದನ್ನು ಬಹಿರಂಗ ಪಡಿಸಿ ನಾನು ಸ್ವಾಗತ ಮಾಡುತ್ತೇನೆ" ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಧರ್ಮ ಅಂತ ಹೇಳಿದ್ದೀರಾ, ಇದನ್ನು ಲಂಚ ಅಂತ ಕರೆಯುತ್ತಾರೆ. ಈ ಬಗ್ಗೆ ಸಿಎಂ ಅವರು ಸ್ಪಷ್ಟತೆ ನೀಡಬೇಕು. ಪ್ರಜಾ ಸೇವಾ ಕಾರ್ಯಕ್ರಮದಲ್ಲಿ ಕೊಟ್ಟ ಮಾತಿನ ನಿಲುವು ಏನು? ಜನರಿಗೆ ಪಾಪದ ಭೀತಿ ಕಾಡೋದು ಬೇಡ. ಹಾಗಾಗಿ ರೇಟ್ ಕಾರ್ಡ್ ಎಷ್ಟು ಅಂತ ಹಾಕಿಬಿಡಿ. ಭ್ರಷ್ಟಾಚಾರಕ್ಕೆ ಧರ್ಮದ ಲೇಪ ಕೊಟ್ಟು ಅಧರ್ಮದ ಕೆಲಸ ಮಾಡಬೇಡಿ ಎಂದು ತಿರುಗೇಟು ನೀಡಿದರು. ಬಿಜೆಪಿ ಶಾಸಕ ಭರತ್ ಶೆಟ್ಟಿ ಮಾತನಾಡಿ, ಸಚಿವ ಶಿವಲಿಂಗೇಗೌಡ ನೀಡಿದ್ದ "ಗೌರವಾರ್ಥವಾಗಿ ಕೊಡಬೇಕು" ಎಂಬ ಹೇಳಿಕೆಯ ಬೆನ್ನಲ್ಲೇ ಭ್ರಷ್ಟಾಚಾರ ಜಾಸ್ತಿಯಾಗಿದೆ. ಬಜ್ಪೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಲಂಚ ಸ್ವೀಕಾರ ಮಾಡುವ ಸಂದರ್ಭದಲ್ಲಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ" ಎಂದು ವಾಗ್ದಾಳಿ ನಡೆಸಿದರು.

**ನಂದಿದ್ದರು ಸಚಿವರು?:** ಪ್ರಜಾಸೇವಾ ಆಂದೋಲನದ ಸಂದರ್ಭದಲ್ಲಿ ಅಬಕಾರಿ ಸಚಿವ ಕೆ.ಎಂ. ಶಿವಲಿಂಗೇಗೌಡಅವರುನೀಡಿರುವಹೇಳಿಕೆವಿವಾದಕ್ಕೆಕಾರಣವಾಗಿತ್ತು."ಕೆಲಸಮಾಡಿಕೊಟ್ಟಅಧಿಕಾರಿಗಳಿಗೆ ಗೌರವಯುತವಾಗಿ ಕೊಡುವುದು ನಿಮ್ಮ ಧರ್ಮ" ಎಂದಿದ್ದರು ಶಿವಲಿಂಗೇಗೌಡರು.ಅಲ್ಲದೆಬಲವಂತವಾಗಿ ಹಣ ಕೀಳುವುದು ಸರಿಯಲ್ಲ ಎಂದೂ ಹೇಳಿಕೊಂಡಿದ್ದರು. ಸಕಲೇಶಪುರದಲ್ಲಿ ಶನಿವಾರ ನಡೆದ ಪ್ರಜಾಸೇವಾ ಆಂದೋಲನ ಸಭೆಯಲ್ಲಿ ಸಾರ್ವಜನಿಕರ ಅಹವಾಲು ಆಲಿಸುತ್ತಿದ್ದ ಸಚಿವ ಕೆ.ಎಂ. ಶಿವಲಿಂಗೇಗೌಡ ನೀಡಿದ್ದ ಈ ಹೇಳಿಕೆ ಭಾರೀ ವಿವಾದಕ್ಕೆ ಕಾರಣವಾಗಿತ್ತು.

**ಸ್ಪಷ್ಟನೆ ನೀಡಿದ್ದ ಜಿಲ್ಲಾಧಿಕಾರಿ:** ಸಚಿವರ ಹೇಳಿಕೆಯ ಬೆನ್ನಲ್ಲೇ ಪಕ್ಕದಲ್ಲಿದ್ದ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಈ ಬಗ್ಗೆ ಸ್ಪಷ್ಟನೆ ನೀಡಲು ಮುಂದಾಗಿದ್ದರು. ಈ ವೇಳೆ ಸಚಿವರು, 'ನಾನು ಲಂಚ ಕೊಡಿ, ದುಡ್ಡು ಕೊಡಿ ಎಂದು ಹೇಳಿಲ್ಲ. ಗೌರವ ಕೊಡಿ ಎಂದು ಹೇಳಿದ್ದೇನೆ' ಎಂದು ಮಾತನ್ನು ಸಮರ್ಥಿಸಿಕೊಂಡಿದ್ದರು.

# ನಕ್ಸಲ್ ಚಳವಳಿ ಹುಟ್ಟಲು ಅರಣ್ಯ ಇಲಾಖೆ ಕಾರಣ

**ಬೆಂಗಳೂರು:** ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಕ್ಸಲ್ ಚಳವಳಿ ಹುಟ್ಟಲು ಅರಣ್ಯ ಇಲಾಖೆ ಕಾರಣ ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ಗಂಭೀರ ಆರೋಪ ಮಾಡಿದ್ದಾರೆ. ವಿಧಾನಸಭೆಯಲ್ಲಿ ಕಸ್ತೂರಿ ರಂಗನ್ ವರದಿ ಜಾರಿ ವಿಚಾರವಾಗಿ ಮಾತನಾಡುವ ಸಂದರ್ಭದಲ್ಲಿ ಕರಾವಳಿ, ಮಲೆನಾಡು ಭಾಗದ ಜನರ ಸಮಸ್ಯೆಗಳ ಬಗ್ಗೆ ಸದನಕ್ಕೆ ವಿವರಿಸಿದ ಅವರು, ಇಕೋ ಸೆನ್ಸಿಟಿವ್ ಝೋನ್ ಹಾಗೂ ಇಕೋ ಸೆನ್ಸಿಟಿವ್ ಏರಿಯಾ ಬಗ್ಗೆ ತಮ್ಮ ಆತಂಕ ಹೊರಹಾಕಿದರು.



ನಮ್ಮ ಜಿಲ್ಲೆಗಳಲ್ಲಿ ಅರಣ್ಯ ಇಲಾಖೆ ಅಂ–ದ್ರೆ ಅರಣ್ಯ ಸಂರಕ್ಷಣೆ ಮಾಡೋದು ಬಿಟ್ಟು ಸಮಸ್ಯೆ ಮಾಡೋದೇ ಅರಣ್ಯ ಇಲಾಖೆ ಆಗಿದೆ. ಹೀಗಾಗಿ ನಮ್ಮ ಭಾಗದಲ್ಲಿ ನಕ್ಸಲ್ ಚಟುವಟಿಕೆ ಹುಟ್ಟಿದ್ದು. ನಮ್ಮ ಜನರು ನಕ್ಸಲರಿಗೆ ಬೆಂಬಲ ಕೊಡಲಿಲ್ಲ. ನಾವು ಸರ್ಕಾರದ ಪರವಾಗಿಯೇ ಇದ್ದೆವು. ಹಾಗಾಗಿ ಪಶ್ಚಿಮ ಘಟ್ಟದಲ್ಲಿ ನಕ್ಸಲ್ ಚಳವಳಿ ಬೆಳೆದಿಲ್ಲ ಎಂದರು.

ಅರಣ್ಯ ಇಲಾಖೆಯ ಒಂದೊಂದು ಸುತ್ತೋಲೆಗಳು ಒಂದೊಂದು ರೀತಿ ಆಗಿವೆ. ಕೊಟ್ಟಿಗೆ ಮನೆ, ಅಡುಗೆ ಮನೆ ಕಟ್ಟುವುದಕ್ಕೂ ಒಂದೊಂದು ರೀತಿ ಅನುಮತಿ ಪಡೆಯಬೇಕಾಗಿದೆ. ಎಲ್ಲದಕ್ಕೂ ರಿಜನಲ್ ಕಮೀಷನರ್ ಅನುಮತಿ ಪಡೆಯಬೇಕಾಗಿದೆ ಎಂದು ವಿವರ ನೀಡಿದರು. ರಾಜ್ಯದಲ್ಲಿ 23 ಅಭಯಾರಣ್ಯಗಳು ಇವೆ. ಕಾಳಿ,ಭದ್ರಾ, ದಾಂಡೇಲಿ ಸೇರಿ ಹಲವು ಅಭಯಾರಣ್ಯಗಳು ಇವೆ. ವಿಪರ್ಯಾಸವೆಂದರೆ, ಲ್ಯಾಪ್ ಟಾಪ್ ಮುಂದೆ ಕುಳಿತವರು ಪಶ್ಚಿಮ ಘಟ್ಟಗಳ ರಕ್ಷಣೆ ಬಗ್ಗೆ ಮಾತಾಡ್ತಾರೆ ಎಂದು ತಿರುಗೇಟು ನೀಡಿದರು. ಸಿಎಂ ಭಾವನೆಗಳ ಮೇಲೆ ಅಲ್ಲ ಬದುಕು ಮೇಲೆ ರಾಜಕೀಯ ಅಂತಾರೆ. ಪಶ್ಚಿಮ ಘಟ್ಟದ ಜನ ಇವೆರಡರ ಮೇಲೆ ಜೀವನ ಕಟ್ಟಿಕೊಂಡಿದ್ದಾರೆ. ಅಲ್ಲಿ ಭಾವನೆಗಳು, ಬದುಕು ಎಲ್ಲವೂ ಇದೆ ಎಂದು ವಿವರಿಸಿದರು. ಜನ ಸಂಸ್ಕೃತಿ ತೆಗೆದು ಪರಿಸರದ ಉಳಿವು ಕಷ್ಟವಾಗಿದೆ. ಜನರನ್ನು ಉಳಿಸಿದರೆ ಮಾತ್ರ ಪರಿಸರ ಉಳಿಯುತ್ತೆ. ಪಶ್ಚಿಮ ಘಟ್ಟದ ಸೆಲ್ಫೀ ಪಾಯಿಂಟ್ ಅಲ್ಲ. ಅದು ಬದುಕಿನ ಪಾಯಿಂಟ್. ಪರಿಸರ ಉಳಿಸುವವರಲ್ಲಿ ನಾವು ಮೊದಲಿಗರು ಎಂದರು.

## ಭಕ್ತಿ, ಸಂಸ್ಕೃತಿ, ಕಲೆಯ ಸಂಗಮ | ರಾಜ–ರಾಜೇಶ್ವರಿ ನಗರದಲ್ಲಿ ಗುರುಸಾರ್ವಭೌಮರ ದರ್ಶನ

# ರಾಣೆಬೆನ್ನೂರಲ್ಲಿ ನೋಡಿ ಬನ್ನಿ ರಾಯರ ಮಂತ್ರಾಲಯದ ಗಣೇಶನ

**ರಾಣೆಬೆನ್ನೂರು:** ಗಣೇಶೋತ್ಸವ ಎಂದರೆ ಕೇವಲ ಗಣೇಶನ ಪ್ರತಿಷ್ಠಾಪನೆ, ಪೂಜೆ, ಮೆರವಣಿಗೆಗೆ ಸೀಮಿತವಾಗದೆ, ಭಕ್ತಿ, ಸಂಸ್ಕೃತಿ ಹಾಗೂ ಕಲೆಯ ಸಂಗಮವಾಗುತ್ತಿದೆ. ಇದಕ್ಕೆ ಸಾಕ್ಷಿಯೆಂಬಂತೆ ರಾಣೆಬೆನ್ನೂರು ರಾಜ–ರಾಜೇಶ್ವರಿ ನಗರದಲ್ಲಿ ನಿರ್ಮಿಸಲಾಗಿರುವ ಮಂತ್ರಾಲಯದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಗಣೇಶ ಮಂಟಪ ಈ ಬಾರಿ ಭಕ್ತರ ಗಮನ ಸೆಳೆಯುವ ಪ್ರಮುಖ ಕೇಂದ್ರವಾಗಿ ರೂಪುಗೊಂಡಿದೆ.

ರಾಜರಾಜೇಶ್ವರಿ ನಗರದ ಶ್ರೀ ಗಜಾನನ ಉತ್ಸವ ಸಮಿತಿ ಹಾಗೂ ಯುವಕ ಮಂಡಳಿ ವತಿಯಿಂದ 34 ವರ್ಷಗಳಿಂದ ನಿರಂತರವಾಗಿ ಗಣೇಶ ಪ್ರತಿಷ್ಠಾಪನೆ ಮಾಡಲಾಗುತ್ತಿದೆ.ಪ್ರತಿವರ್ಷವೂವಿಭಿನ್ನಪರಿಕಲ್ಪನೆಯೊಂದಿಗೆಗಣೇಶೋತ್ಸವ ಆಚರಿಸುತ್ತಿರುವ ಮಂಡಳಿ, ಈ ಬಾರಿ ಮಂತ್ರಾಲಯದ ವಾತಾವರಣವನ್ನು ಕಲಾತ್ಮಕವಾಗಿ ಮರುಸೃಷ್ಟಿಸಲಾಗಿದೆ. ಭಕ್ತರಿಗೆ ರಾಘವೇಂದ್ರ ಸ್ವಾಮಿಗಳ ಜೀವನ ಮತ್ತು ಆಧ್ಯಾತ್ಮಿಕ ಸಂದೇಶವನ್ನು ಪರಿಚಯಿಸುವ ರೀತಿಯಲ್ಲಿ ವಿನ್ಯಾಸ ಮಾಡಲಾಗಿದೆ.

ಉಬ್ಬು ಚಿತ್ರ ಕಲೆಯಲ್ಲಿ ಜೀವನ ಚರಿತ್ರೆ

ರಾಯರಜೀವನಚರಿತ್ರೆಯನ್ನುಬಾಲ್ಯದಿಂದಎಳೆಎಳೆಯಾಗಿಪ್ರಚಾರಪಡಿಸುವ ಮಂಟಪ ಮಾಡಲಾಗಿದೆ. ಆರಂಭದಲ್ಲಿ ಎಂಬೋಜಿಂಗ್ ಕಲೆಯಲ್ಲಿ (ಉಬ್ಬು ಚಿತ್ರ ಕಲೆ) ಕಟ್ಟಿಗೆ ಪ್ರೇಮುಗಳ ಮೇಲೆ ರಾಘವೇಂದ್ರ ಸ್ವಾಮಿಗಳ ಜನನದಿಂದ ಅವರ ಜೀವನ ಚರಿತ್ರೆಯ ಕಥೆಯನ್ನು ಚಿತ್ರಗಳ ಸಮೇತ ಸವಿವರವಾದ ಮಾಹಿತಿ ಒದಗಿಸಲಾಗಿದೆ. ಪ್ರತಿಯೊಂದು ಫ್ರೇಮಿನಲ್ಲಿಯೂ ಮಹತ್ವವಾದ ವಿಷಯಗಳನ್ನು ಹಾಕಿದ್ದು, ಭಕ್ತರು ಸರಳವಾಗಿ ಅರ್ಥ ಮಾಡಿಕೊಳ್ಳಲು ವೀಕ್ಷಣೆ ರೀತಿ ಹಾಕಲಾಗಿದೆ. ರಾಘವೇಂದ್ರ ಸ್ವಾಮಿಗಳ ಬಾಲ್ಯದಿಂದ ಅವರು ಬೃಂದಾವನ ಪ್ರವೇಶ ಮಾಡುವವರೆಗೂ ಮಾಹಿತಿ ಕಟ್ಟಿಕೊಡಲಾಗಿದೆ.

> **ರಾಜರಾಜೇಶ್ವರಿ ನಗರದ ಯುವಕ ಮಂಡಳಿ ಈ ಬಾರಿ ಮಂತ್ರಾಲಯದ ಮಾದರಿಯ ಮಂಟಪ ನಿರ್ಮಿಸಲಾಗಿದೆ. ಕಳೆದ ವರ್ಷ ಅನುಭವ ಮಂಟಪದ ಮೂಲಕ ವಚನಕಾರರ ಸಂದೇಶಗಳನ್ನು ಜನರಿಗೆ ಪರಿಚಯಿಸಲಾಗಿತ್ತು. ಈ ಬಾರಿ ಮಹಾತ್ಮರ ಸಾನ್ನಿಧ್ಯವನ್ನು ಬಿಂಬಿಸುವ ಮಂತ್ರಾಲಯದ ಮಂಟಪ ನಿರ್ಮಿಸಲಾಗಿದ್ದು, ಈಗಾಗಲೇ ಸಾವಿರಾರು ಭಕ್ತರು ಆಗಮಿಸಿ ಗಣೇಶನ ದರ್ಶನದ ಜತೆಗೆ ಮಂಟಪದ ವೈಶಿಷ್ಟ್ಯವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ. ಭಕ್ತರಿಗೆ ಆಧ್ಯಾತ್ಮಿಕ ಅನುಭವ ನೀಡುತ್ತಿದೆ.**
> **ಸಂತೋಷ ತೆವರಿ, ಅಧ್ಯಕ್ಷ, ಶ್ರೀ ಗಜಾನನ ಉತ್ಸವ ಸಮಿತಿ. ರಾಣೆಬೆನ್ನೂರು.**



### ಶ್ರೀ ಸುಬುಧೇಂದ್ರ ತೀರ್ಥರ ಭೇಟಿ

**ರಾಣೆಬೆನ್ನೂರಿನ ರಾಜ ರಾಜೇಶ್ವರಿ ನಗರದಲ್ಲಿ ನಿರ್ಮಿಸಿರುವ ರಾಯರ ಮಂತ್ರಾಲಯ ಹೆಸರಿನ ಗಣೇಶ ಮಂಟಪ ವೀಕ್ಷಿಸಲು ಬರುವುದಾಗಿ ಮಂತ್ರಾಲಯದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಉತ್ಸವ ಸಮಿತಿ ಸದಸ್ಯರಿಗೆ ತಿಳಿಸಿದ್ದಾರೆ.**

**ರೋಮಾಂಚನ ಮಂಟಪ:** ಎಲ್ಲವನ್ನೂ ವೀಕ್ಷಣೆ ಮಾಡಿದ ನಂತರ ರಾಘವೇಂದ್ರ ಸ್ವಾಮಿಗಳು ಪೂಜಿಸುತ್ತಿದ್ದ ಮೂಲ ರಾಮದೇವರು ಮಂಟಪ ದರ್ಶನವಾಗುತ್ತದೆ. ಅದಾದ ಮೇಲೆ ಶ್ರೀ ಮಂಚಾಲಮ್ಮದೇವಿಯ ದರ್ಶನ ಲಭಿಸುತ್ತದೆ. ಅಲ್ಲಿಂದ ರಾಘವೇಂದ್ರ ಸ್ವಾಮಿಗಳ ಬೃಂದಾವನ ಹಾಗೂ ಮೂಲ ಮೂರ್ತಿಯ ರೀತಿಯ ದರ್ಶನ ಪ್ರಾಪ್ತಿಯಾಗುತ್ತದೆ. ಮಂತ್ರಾಲಯದ ಆಕರ್ಷಣೆ ಮಂಟಪ ಜನರನ್ನು ಆಧ್ಯಾತ್ಮಿಕ ಪ್ರಪಂಚಕ್ಕೆ ಕರೆದುಕೊಂಡು ಹೋಗುತ್ತದೆ. ಹಳ್ಳೂರು ಗ್ರಾಮದ ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನದಲ್ಲಿದ್ದ 12ನೇ ಶತಮಾನದ ಗಂಧ ತೇಯುವ ಸಾಣೇಕಲ್ಲು ಇಡಲಾಗಿದ್ದು, ಇದರಿಂದ ಗಂಧ ತೇಯುದು ಪ್ರತಿಯೊಬ್ಬ ಭಕ್ತರಿಗೆ ಹಚ್ಚುವ ವ್ಯವಸ್ಥೆ ಮಾಡಲಾಗಿದೆ. ಪುರಾತನ ಪರಂಪರೆಯನ್ನು ಪರಿಚಯಿಸುವ ಪ್ರಯತ್ನವೂ ನಡೆದಿದೆ.







**ಗಣಪನ ಮೂಲಕ ರಾಯರ ದರ್ಶನ:** ಕೊನೆಯಲ್ಲಿ ರಾಘವೇಂದ್ರಸ್ವಾಮಿ ವೇಷಧಾರಿ ಗಣೇಶ ಪ್ರತ್ಯಕ್ಷನಾಗುತ್ತಾನೆ. ಶ್ರೀ ರಾಘವೇಂದ್ರ ಸ್ವಾಮಿಗಳು ಅವತಾರದಲ್ಲಿ ಗಣೇಶ ಮೂರ್ತಿಯನ್ನು ಮಾಡಲಾಗಿದ್ದು, ಗಣೇಶ ಕೈಯಲ್ಲಿ ಭಗವಾನ್ ಶ್ರೀಕೃಷ್ಣನ ಮೂರ್ತಿ ಹಿಡಿದುಕೊಂಡು ಜಪಿಸುವ ಮೂರ್ತಿ ಜನರನ್ನು ಭಕ್ತಿಭಾವನೆಯ ಭಕ್ತಿಗೆ ತಳುತ್ತದೆ. ಆ ಮಂಟಪಕ್ಕೆ ಪ್ರವೇಶಿಸುವ ಪ್ರತಿಯೊಬ್ಬ ಭಕ್ತರ ಹಣೆಗೂ ಗಣೇಶ ಸಮಿತಿ ಕಾರ್ಯಕರ್ತರು ನಾಮ ಬಿಡಿಸಿ ಹಾಗೂ ಮಂತ್ರಾಲಯದಿಂದ ತರಿಸಲಾದ ಪರಿಮಳ ಪ್ರಸಾದ ಮತ್ತು ಅಕ್ಷತೆಯನ್ನು ವಿತರಿಸಲಾಗುತ್ತದೆ. 21 ದಿನಗಳ ಕಾಲ ಭಕ್ತಾದಿಗಳಿಗೆ ದರ್ಶನದ ಅವಕಾಶವಿದ್ದು ಪ್ರತಿ ದಿನ ಸಂಜೆ 5ರಿಂದ ರಾತ್ರಿ 10ರ ವರೆಗೆ ವೀಕ್ಷಣೆ ಮಾಡಬಹುದು.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114